بِسۡمِ اللّٰہِ الرَّحۡمٰنِ الرَّحِیۡمِ  نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ  وَعَلٰی عَبۡدِہِ الۡمَسِیۡحِ الۡمَوۡعُوۡد

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 01

ಸಂಚಿಕೆ: 07

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**27 ಫೆಬ್ರವರಿ 2020, 27 ತಬ್‌ಲೀಗ್ 1399 ಹಿಜರಿ ಶಮ್‌ಸಿ, 02 ರಜಬ್ 1441 ಹಿಜರಿ ಖಮರಿ.**


### ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ

وَبَارِكْ لَنَا فِيْ عُمُرِهٖ وَاَمْرِهٖ

### ಅಲ್ಲಾಹನ ಉಪದೇಶ

وَلَا يَحْزُنْكَ الَّذِيْنَ يُسَارِعُوْنَ فِي الْكُفْرِ ۚ اِنَّهُمْ لَنْ يَّضُرُّوا اللّٰهَ شَيْـًٔا ۗ يُرِيْدُ اللّٰهُ اَلَّا يَجْعَلَ لَهُمْ حَظًّا فِي الْاٰخِرَةِ ۚ وَلَهُمْ عَذَابٌ عَظِيْمٌ ○ (آل عمران:177)

*(ಆಲಿ ಇಮ್ರಾನ್ 177)*

ಅಂದರೆ: ಅವಿಶ್ವಾಸದಲ್ಲಿ ತ್ವರಿತವಾಗಿ ಸಾಗುವವರು ನಿನ್ನನ್ನು ವ್ಯಾಕುಲಗೊಳಿಸದಿರಲಿ. ಅವರು ಖಂಡಿತವಾಗಿಯೂ ಅಲ್ಲಾಹನಿಗೆ ಯಾವುದೇ ಹಾನಿಯನ್ನುಂಟು ಮಾಡುವುದಿಲ್ಲ. ಪರಲೋಕದಲ್ಲಿ ಅವರಿಗೆ ಯಾವುದೇ ಪಾಲನ್ನು ನೀಡದೆ ಇರಲು ಅಲ್ಲಾಹನು ಬಯಸುತ್ತಾನೆ. ಅವರಿಗೆ ಕಠಿಣವಾದ ಶಿಕ್ಷೆ ಕಾದಿದೆ.

**ಹಝ್‌ರತ್ ರಸೂಲುಲ್ಲಾಹ್(ಸ) ರವರ ಮಹೋನ್ನತ ಗುಣಗಳು ಅವರ ವ್ಯವಹಾರಿಕ ದೃಷ್ಟಿಯಿಂದಲೂ ಮತ್ತು ಅನುಭವದ ದೃಷ್ಟಿಯಿಂದಲೂ ಪರಿಪೂರ್ಣ ಮಾನದಂಡ ರೂಪದಲ್ಲಿ ಸಾಬೀತುಗೊಂಡಿವೆ.**
**ಇವು ಕೇವಲ ಮಾತುಗಳಲ್ಲ. ಬದಲಾಗಿ ಅದರ ಸಾಕ್ಷ್ಯಗಳು ನಮ್ಮ ಕೈಯಲ್ಲಿರುವ ಅಂಕೆ ಸಂಖ್ಯೆಯಂತೆ ಮತ್ತು ಗಣಿತ ಸಿದ್ಧಾಂತಗಳಂತೆ ಸರಿಯಾದುದು. ಮತ್ತು ಖಚಿತತೆ ಹೊಂದಿವೆ. ಇದನ್ನು ನಾವು ಎರಡು ಎರಡು ನಾಲ್ಕರಂತೆ ಸಾಬೀತು ಮಾಡಬಹುದು. ಆದರೆ ಯಾವ ಪ್ರವಾದಿಯ ಅನುಯಾಯಿಯೂ ಹೀಗೆ ಮಾಡಲು ಸಾಧ್ಯವಿಲ್ಲ.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಹಝ್‌ರತ್ ರಸೂಲುಲ್ಲಾಹ್(ಸ) ರವರ ಮಹೋನ್ನತ ಗುಣಗಳು

ರಸೂಲುಲ್ಲಾಹ್(ಸ) ರವರ ಮಹೋನ್ನತ ಗುಣಗಳು ಎಲ್ಲರಿಗಿಂತ ಸರ್ವಶ್ರೇಷ್ಠ ಮಾದರಿ ಮತ್ತು ಮಾನದಂಡರೂಪವು ಹಝ್‌ರತ್ ರಸೂಲುಲ್ಲಾಹ್(ಸ) ರವರಾಗಿದ್ದಾರೆ ಅವರು ಎಲ್ಲಾ ರೀತಿಯ ಉತ್ತಮ ಗುಣಗಳಿಂದ ಪರಿಪೂರ್ಣರಾಗಿದ್ದರು. ಆ ಕಾರಣದಿಂದಲೇ ಅವರ ಬಗ್ಗೆ ಅಲ್ಲಾಹನು ನುಡಿದನು. **"ಇನ್ನಕ ಲಅಲಾ ಖುಲುಖಿನ್ ಅಝೀಮ್** (ಅಲ್‌ಖಲಮ್:5)

ಒಂದು ಸಮಯಕ್ಕೆ ಅವರು ತಮ್ಮ ವಿವೇಕಪೂರ್ಣ ಮಾತುಗಳಿಂದ ಒಂದು ಸಮೂಹವನ್ನು ಮೂರ್ತರೂಪದಲ್ಲಿ ಅಚ್ಚರಿಗೊಳಿಸುತ್ತಿದ್ದಾರೆ. ಒಂದು ಸಮಯ ಬರುತ್ತದೆ. ಬಿಲ್ಲುಬಾಣ ಆಯುಧಗಳ ಮೈದಾನಕ್ಕಿಂತ ಹೆಚ್ಚು ಶೌರ್ಯ ಪ್ರಕಟ ಪಡಿಸುತ್ತಾರೆ. ದಾನ ಮಾಡಲು ಹೊರಟರೆ ಚಿನ್ನದ ಪರ್ವತಗಳನ್ನು ಲೆಕ್ಕಿಸುವುದಿಲ್ಲ. ಸಹನಶೀಲತೆ ನೋಡುವುದಾರೆ ಹತ್ಯೆಗೆ ಅರ್ಹರನ್ನು ಕೂಡ ಬಿಟ್ಟು ಬಿಡುತ್ತಾರೆ. ಒಟ್ಟಿನಲ್ಲಿ ರಸೂಲುಲ್ಲಾಹ್(ಸ) ರವರ ಅನುಪಮ ಜೀವನ ಮಾದರಿ ಹಾಗೂ ಪರಿಪೂರ್ಣ ಮಾದರಿ ಲೋಕಕ್ಕೆ ತೋರ್ಪಡಿಸಿದ್ದಾರೆ. ಇದಕ್ಕೆ ಉದಾಹರಣೆ ಒಂದು ಮಹೋನ್ನತ ವೃಕ್ಷದಂತಿದೆ. ಅದರ ನೆರಳಲ್ಲಿ ಕೂತು ಮನುಷ್ಯನು ಅದರ ಪ್ರತಿಯೊಂದು ಅಂಗದಿಂದಲು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುತ್ತಾನೆ ಅದರ ಫಲ, ಅದರ ಹೂವುಗಳು ಮತ್ತು ಅದರ ಸಿಪ್ಪೆಗಳೂ ಅದರ ಎಲೆಗಳೂ ಎಲ್ಲವೂ ಪ್ರಯೋಜನಕಾರಿಯಾಗಿವೆ. ಹಝ್‌ರತ್ ರಸೂಲುಲ್ಲಾಹ್(ಸ) ರವರು ಆ ಮಹೋನ್ನತ ವೃಕ್ಷದ ಉದಾಹರಣೆಯಾಗಿದ್ದಾರೆ. ಅದರ ನೆರಳಿನಲ್ಲಿ ಕೋಟ್ಯಾನುಗಟ್ಟಲೆ ಜನರು ಕೋಳಿಯ ರೆಕ್ಕೆ ಪುಕ್ಕದೊಳಗೆ ಶರಣುಹೊಂದಿ ಸುಖ ಪಡೆಯುತ್ತಿದ್ದಾರೆ. ಯುದ್ಧದಲ್ಲಿ ಹಝ್‌ರತ್ ರಸೂಲುಲ್ಲಾಹ್(ಸ) ರವರ ನಿಕಟ ಸಂಪರ್ಕದಲ್ಲಿದ್ದವನು ಅತ್ಯಂತ ಶೌರ್ಯವಂತ ಎಂದು ಪರಿಗಣಿಸಲ್ಪಡುತ್ತಿದ್ದನು. ಏಕೆಂದರೆ ಅವರು ಅತ್ಯಂತ ಅಪಾಯಕರ ಸ್ಥಾನದಲ್ಲಿರುತ್ತಿದ್ದರು. ಸುಬ್‌ಹಾನಲ್ಲಾಹ್! ಎಂತಹ ಮಹೋನ್ನತ ಸ್ಥಾನವಿದೆ. ಉಹುದ್ ಯುದ್ಧ ನೋಡಿರಿ. ಖಡ್ಗಗಳ ಮೇಲೆ ಖಡ್ಗಗಳು ಬೀಳುತ್ತವೆ. ಎಂತಹ ಘನಘೋರ ಯುದ್ದವಾಗುತ್ತದೆ ಎಂದರೆ ಸಹಾಬರಿಗೆ ಸಹಿಸಲು ಆಗುತ್ತಿರಲಿಲ್ಲ. ಆದರೆ ಈ ಶೌರ್ಯ ವಂತನ್ನು ಎದೆಕೊಟ್ಟು ಹೋರಾಡುತ್ತಿದ್ದಾನೆ. ಇದರಲ್ಲಿ ಸಹಾಬರ ದೋಷವಿರಲಿಲ್ಲ. ಅಲ್ಲಾಹನು ಅವರಿಗೆ ಕ್ಷಮಿಸಿದನು. ಆದರೆ ಇದರ ರಹಸ್ಯ ರಸೂಲುಲ್ಲಾಹ್(ಸ) ರವರ ಶೌರ್ಯದ ಮಾದರಿಯನ್ನು ತೋರಿಸುವುದಾಗಿತ್ತು. ಒಂದು ಸಂಧರ್ಭದಲ್ಲಿ ಖಡ್ಗಗಳ ಮೇಲೆ ಖಡ್ಗಗಳು ಬೀಳುತ್ತಿದ್ದವು. ಅವರು ಪ್ರವಾದಿತ್ವದ ದಾವೆ ಮಡುತ್ತಿದ್ದರು. ನಾನು ಮುಹಮ್ಮದ್ ಅಲ್ಲಾಹನ ಪ್ರವಾದಿಯಾಗಿದ್ದೇನೆ ಎಂದು. ಅವರ ಹಣೆಯ ಮೇಲೆ 70 ಗಾಯಗಳಾಗಿದ್ದವು ಎಂದು ತಿಳಿದುಬರುತ್ತದೆ. ಆದರೆ ಆ ಗಾಯಗಳು ಸಣ್ಣದಾಗಿದ್ದವು. ಇದು ಮಹೋನ್ನತ ಗುಣವಾಗಿತ್ತು.

ಒಂದು ಸಮಯ ಬರುತ್ತದೆ. ಅವರ ಬಳಿ ಖೈಸರ್ ವ ಕಿಸ್ರಾ (ರೋಮ್ ಮತ್ತು ಇರಾನ್ ಅರಸರ) ಕ್ಕಿಂತ ಹೆಚ್ಚು ಕುರಿ ಮರಿಗಳ ಮಾಲೀಕರಾಗಿದ್ದರು. ಅವರು ಅವೆಲ್ಲ ಒಬ್ಬ ಬೇಡುವವನಗೆ ಕೊಟ್ಟು ಬಿಟ್ಟರು. ಅವರ ಬಳಿ ಏನು ಇರುತ್ತಿರಿಲ್ಲವಾದರೆ ಅವರು ಏನೂ ಕೊಡಲು ಸಾಧ್ಯವಿತ್ತು. ಆಡಳಿತ ಅವರ ಕೈಯಲ್ಲಿ ಇರುತ್ತಿರಲಿಲ್ಲವಾದರೆ ಹತ್ಯೆಗೆ ಅರ್ಹರಾಗುವಂತಹ ಮಕ್ಕ ಶತ್ರುಗಳಿಗೆ ಅವರು ಸೇಡು ತೀರಿಸಿಕೊಳ್ಳುವ ಬಲ ಹೊಂದಿದ್ದರೂ ಕ್ಷಮಿಸುವಂತಹ ಉದಾರ ಗುಣ ಹೇಗೆ ತಿಳಿಯಲು ಸಾಧ್ಯವಿತ್ತು. ಆ ಶತ್ರುಗಳು ಸಹಾಬರಿಗೆ ಮಾತ್ರವಲ್ಲ. ಸ್ವಯಂ ಪ್ರವಾದಿ(ಸ) ನಾನಾ ತರಹದ ಕಷ್ಟಗಳನ್ನು ದೌರ್ಜನ್ಯಗಳನ್ನು ನೀಡಿದ್ದರು. ಮುಸ್ಲಿಮ್ ಮಹಿಳೆಯರ ಮೇಲೆಯೂ ದೌರ್ಜನ್ಯ ಎಸಗಿದ್ದರು. ಇವೆಲ್ಲ ದೃಷ್ಕೃತ್ಯಗಳು ಅವರ ಮುಂದೆ ಬಂದಾಗ ಅವರು ಹೇಳುತ್ತಿದ್ದರು. **ಲಾತಸ್‌ರೀಬ ಅಲೈಕುಮುಲ್ ಯೌಮ** ಇಂದಿನ ದಿವಸ ನಿಮಗೆಲ್ಲರಿಗೂ ಕ್ಷಮಿಸಿರುತ್ತೇನೆ. ಇಂತಹ ಸಂದರ್ಭ ಒದಗಿ ಬರುತ್ತಿರಲಿಲ್ಲವಾದರೆ ಅವರ ಇಂತಹ ಮಹೋನ್ನತ ಗುಣಗಳು ಕಾಣಲು ಹೇಗೆ ಸಾಧ್ಯವಿತ್ತು. ಈ ಗೌರವಕ್ಕೆ ಅವರು ಮಾತ್ರ ಅರ್ಹರಾಗಿದ್ದರು. ಇಂತಹದೊಂದು ಗುಣ ಅವರಲ್ಲಿ ಇರದಿದ್ದರೆ ತೋರಿಸಿಕೊಡಿ. ಅದುವೇ ಎಲ್ಲ ರೀತಿಯಿಂದ ಉನ್ನತ ಮಟ್ಟ ಹೊಂದಿದ್ದವು. ಪರಿಪೂರ್ಣತೆ ಹೊಂದಿದ್ದವು.

ಹಝ್‌ರತ್ ಈಸ ಮಸೀಹ್(ಅ) ಅವರ ಜೀವನವನ್ನು ಅವಲೋಕಿಸಿದರೆ ಅವರ ಗುಣಗಳು ಗುಪ್ತವಾಗಿದ್ದವು ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ದುಷ್ಕರ್ಮಿಗಳಾದ ಯಹೂದಿಯರಿಗೆ ಸರಕಾರದಿಂದ ಪದವಿಗಳು ದೊರೆಯುತ್ತಿತ್ತು. ರೋಮಿನ ಸರಕಾರ ಈ ಕಾರಣದಿಂದ ಅವರಿಗೆ ಗೌರವ ನೀಡುತ್ತಿತ್ತು. ಮಸೀಹರನ್ನು ಪೀಡಿಸುತ್ತಿದ್ದರು. ಆದರೆ ಆಡಳಿತದ ಯಾವ ಸಂದರ್ಭವೂ ಮಸೀಹರಿಗೆ ಅವರ ಜೀವನದಲ್ಲಿ ಒದಗಿಬರಲಿಲ್ಲ. ಒದಗಿ ಬರುತ್ತಿದ್ದರೆ ನಾವು ತಿಳಿಯಬಹುದಾಗಿತ್ತು. ಆಡಳಿತ ಹೊಂದಿದ್ದರೆ ದುಷ್ಕರ್ಮಿಗಳಿಗೆ ಯಾವ ರೀತಿ ಕ್ಷಮಿಸುತ್ತಿದ್ದರು ಎಂದು. ಆದರೆ ಇದರ ತದ್ವಿರುದ್ಧವಾಗಿ ಹಝ್‌ರತ್ ರಸೂಲುಲ್ಲಾಹ್(ಸ) ರವರ ಗುಣಗಳು ಅವರ ವ್ಯವಹಾರಿಕ ದೃಷ್ಟಿಯಿಂದಲೂ ಮತ್ತು ಅನುಭವದ ದೃಷ್ಟಿಯಿಂದಲೂ ಪರಿಪೂರ್ಣ ಮಾನದಂಡ ರೂಪದಲ್ಲಿ ಸಾಬೀತುಗೊಂಡಿದೆ. ಇವು ಕೇವಲ ಮಾತುಗಳಲ್ಲ. ಬದಲಾಗಿ ಸಾಕ್ಷ್ಯಗಳು ನಮ್ಮ ಕೈಯಲ್ಲಿರುವ ಅಂಕೆ ಸಂಖ್ಯೆಯಂತೆ ಮತ್ತು ಗಣಿತ ಸಿದ್ಧಾಂತಗಳಂತೆ ಸರಿಯಾದುದು ಮತ್ತು ಖಚಿತತೆ ಹೊಂದಿದೆ. ಇದನ್ನು ನಾವು ಎರಡು ಎರಡು ನಾಲ್ಕರಂತೆ ಸಾಬೀತು ಮಾಡಬಹುದು. ಆದರೆ ಯಾವ ಪ್ರವಾದಿಯ ಅನುಯಾಯಿಯಿಂದಲೂ ಹೀಗೆ ಮಾಡಲು ಸಾಧ್ಯವಾಗಲಿಕ್ಕಿಲ್ಲ. ಆ ಕಾರಣದಿಂದಲೇ ಅವರ ಮಾದರಿ ರೂಪವನ್ನು ಇಂತಹದೊಂದು ವೃಕ್ಷದಿಂದ ಕೊಡಲಾಗಿದೆ. ಅದರ ಬೇರು, ಸಿಪ್ಪೆ, ಹೂವುಗಳು, ಫಲಗಳು, ಎಲೆಗಳು ಒಟ್ಟಿನಲ್ಲಿ ಪ್ರತಿಯೊಂದು ಲಾಭದಾಯಕವು ಮತ್ತು ಅತ್ಯಂತ ಉನ್ನತ ದರ್ಜೆಯ

*(ಪುಟ ಸಂಖೆ 08 ರಲ್ಲಿ ಮುಂದುವರಿಸಲಾಗಿದೆ)*

**ತಮ್ಮ ವರ್ತನೆಗಳನ್ನು ಉನ್ನತಗೊಳಿಸಿರಿ. ಕೇವಲ ಹೆಸರಿಗಾಗಿ ಅಹ್ಮದಿ ಆಗುವುದು ಸಾಕಾಗುವುದಿಲ್ಲ. ತಮ್ಮಲ್ಲಿ ತಖ್ವ (ಭಯಭಕ್ತಿ) ಹುಟ್ಟಿಸಿರಿ ತಖ್ವ ಕೇವಲ ಹೆಸರಿನಿಂದ ಹುಟ್ಟುವುದಿಲ್ಲ ಬದಲಿಗೆ ಅದು ಹುಟ್ಟುವುದು ಒಳ್ಳೆಯ ನಡತೆಯಿಂದ.**

**ಅಲ್ಲಾಹನ ಆರಾಧನೆಯ ಹಕ್ಕು ನಾವು ನಮಾಝ್‌ಗಳನ್ನು ನಿರ್ವಹಿಸುವುದರಿಂದ ಸಾಧ್ಯ. ಆದ್ದರಿಂದ ಪ್ರತಿಯೊರ್ವ ಅಹ್ಮದಿಯು ತಮ್ಮ ನಮಾಝ್‌ಗಳನ್ನು ಸಂರಕ್ಷಿಸಿಕೊಳ್ಳಿರಿ.**

**ತಾವೆಲ್ಲರು ನಮಾಝ್ ನಿರ್ವಹಿಸುವವರಾಗಿದ್ದಲ್ಲಿ ನೀವು ನಿಮ್ಮ ಪೀಳಿಗೆಗಳನ್ನು ಸಹ ನಮಾಝ್ ನಿರ್ವಹಿಸುವವರಾಗಿಸಲು ಸಾಧ್ಯ. ನಿಮ್ಮ ಎಲ್ಲಾ ತರಬೇತಿಯ ಸಮಸ್ಯೆಗಳು ಬಗೆಹರಿಯುವುವು.**

## ಜೂನ್ 21 ರಿಂದ 23, 2019ರಲ್ಲಿ ಆಯೋಜಿಸಲಾದ 13ನೇ ಜಲ್ಸ ಸಾಲಾನ ಇಟಲಿಯ ಸುವರ್ಣ ಸಂದರ್ಭದಲ್ಲಿ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫರ ವಿಶೇಷ ಸಂದೇಶ

بسم اللہ الرحمٰن الرحیم

نحمدہ ونصلی علی رسولہ الکریم وعلی عبدہ المسیح الموعود

خدا کے فضل اور رحم کے ساتھ

ھو الناصر

ಅಹ್ಮದಿಯ ಜಮಾಅತ್ ಇಟಲಿಯ ಪ್ರೀತಿಯ ಸದಸ್ಯರೆ!

**ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತಹು** السلام علیکم ورحمۃ اللہ وبرکاتہ

ಅಲ್‌ಹಮ್‌ದುಲಿಲ್ಲಾಹ್!! ಅಲ್ಲಾಹನ ಅನುಗ್ರಹದಿಂದ ಜಮಾಅತೆ ಅಹ್ಮದಿಯ ಇಟಲಿಗೆ ತನ್ನ ಜಲ್ಸ ಸಾಲನ ಆಯೋಜಿಸುವ ಸೌಭಾಗ್ಯ ಪಡೆಯುತ್ತಿದೆ. ಅಲ್ಲಾಹನು ನಿಮ್ಮ ಈ ಜಲ್ಸವನ್ನು ಪ್ರತಿ ಹಂತದಲ್ಲಿ ಅನುಗ್ರಹದಾಯಕಗೊಳಿಸಲಿ ಮತ್ತು ಅಲ್ಲಾಹನು ನಿಮ್ಮೆಲ್ಲರಿಗೂ ಈ ಆಧ್ಯಾತ್ಮಿಕ ಅನುಗ್ರಹಗಳನ್ನು ಗಳಿಸುವ ಸೌಭಾಗ್ಯ ನೀಡಲಿ. ನೆನಪಿರಲಿ ಈ ಜಲ್ಸ ಒಂದು ಧಾರ್ಮಿಕ ಸಭೆ ಆಗಿದೆ ಆದ್ದರಿಂದ ಇದರಲ್ಲಿ ಭಾಗವಹಿಸುವ ಎಲ್ಲಾ ಜನರು ಅಲ್ಲಾಹನ ಘನತೆ ಹಾಗೂ ಅವನ ನಾಮಸ್ಮರಣೆಯ ಕಡೆ ವಿಶೇಷವಾಗಿ ಗಮನ ಹರಿಸಬೇಕು. ಈಗಷ್ಟೆ ತಾವೆಲ್ಲರು ಪವಿತ್ರ ಮಾಸವಾದ ರಮಝಾನಿನ ಪವಿತ್ರ ದಿನಗಳನ್ನು ಕಳೆದಿದ್ದೀರಿ ಅದರಲ್ಲಿ ತಾವು ಅಲ್ಲಾಹನ ಆರಾಧನೆ ಹಾಗೂ ಉಪಾಸಗಳನ್ನು ಅನುಷ್ಠಿಸುವ ಸೌಭಾಗ್ಯ ಪಡೆದಿದ್ದೀರಿ. ಈ ಸಂದರ್ಭದಲ್ಲಿ ನಿಮಗೆ ನನ್ನ ಸಂದೇಶವು ಹೀಗಿದೆ: ಪವಿತ್ರ ಮಾಸದಲ್ಲಿ ನೀವೆಲ್ಲರು ಮಾಡಿರುವಂತಹ ಆರಾಧನೆ ಹಾಗೂ ಉತ್ತಮ ಪರಿವರ್ತನೆಗಳನ್ನು ತಮ್ಮ ಜೀವನದಲ್ಲಿ ಸ್ಥಿರವಾಗಿ ಅಳವಡಿಸಿಕೊಳ್ಳಿರಿ. ತಮ್ಮ ವರ್ತನೆಗಳನ್ನು ಉನ್ನತಗೊಳಿಸಿರಿ. ಕೇವಲ ಹೆಸರಿಗಾಗಿ ಅಹ್ಮದಿ ಆಗುವುದು ಸಾಕಾಗುವುದಿಲ್ಲ. ತಮ್ಮಲ್ಲಿ ತಖ್ವ (ಭಯಭಕ್ತಿ) ಹುಟ್ಟಿಸಿರಿ ತಖ್ವ ಕೇವಲ ಹೆಸರಿನಿಂದ ಹುಟ್ಟುವುದಿಲ್ಲ ಬದಲಿಗೆ ಅದು ಹುಟ್ಟುವುದು ಒಳ್ಳೆಯ ನಡತೆಯಿಂದ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ಅಲ್ಲಾಹನು ನಮ್ಮನ್ನು ನೇಮಿಸಿರುವ ಕಾರಣ ಏನೆಂದರೆ ತಖ್ವದ ವ್ಯಯದಾನವು ಖಾಲಿ ಆಗಿದೆ. ತಖ್ವ ಇರಬೇಕು....... ನೀವಿ ತಖ್ವ ಹೊಂದಿದವರಾಗಿದ್ದರೆ ಇಡಿ ವಿಶ್ವವು ನಿಮ್ಮೊಂದಿಗಿರುವುದು. ಆದ್ದರಿಂದ ನೀವು ತಮ್ಮಲ್ಲಿ ತಖ್ವ ಹುಟ್ಟಿಸಿರಿ. ಮದ್ಯಪಾನ ಮಾಡುವವರು ಅಥವಾ ಯಾರ ಧರ್ಮದಲ್ಲಿ ಮದ್ಯವು ಧರ್ಮ ಬದ್ಧವಾಗಿದೆಯೋ ಅವರಿಗೆ ತಖ್ವದಿಂದ ಯಾವ ಸಂಬಂಧವೂ ಇಲ್ಲ. ಅವರೆಲ್ಲರು ಒಳ್ಳೆಯ ತನದೊಂದಿಗೆ ಯುದ್ಧಮಾಡುತ್ತಿದ್ದಾರೆ. ಆದ್ದರಿಂದ ಅಲ್ಲಾಹನು ನಮ್ಮ ಜಮಾಅತ್ತಿನವರಿಗೆ ಇಂತಹ ಕೆಟ್ಟತನದ ವಿರುದ್ಧ ಯುದ್ಧಮಾಡಲು ಸೌಭಾಗ್ಯ ನೀಡಲಿ. ಅಲ್ಲಾಹನು ನಮ್ಮ ಜಮಾಅತ್ತಿನವರನ್ನು ಇಂತಹ ಅದೃಷ್ಟರನ್ನಾಗಿ ಮಾಡಲಿ. ಇದು ಒಂದು ದೊಡ್ಡ ವಿಜಯವಾಗಿದೆ ಮತ್ತು ಅದಕ್ಕಿಂತ ಹೆಚ್ಚು ಪರಿಣಾಮಕಾರಿ ವಸ್ತು ಯಾವುದು ಇಲ್ಲ." **(ಮಲ್‌ಫೂಝಾತ್, ಸಂಪುಟ-2, ಪುಟ-645. 2003ರ ಪ್ರಕಟಣೆ, ಖಾದಿಯಾನ್)**

ಅನಂತರ ನಮಾಝ್ ಆಗಿದೆ ಅದನ್ನು ನಿರ್ವಹಿಸುವುದಾಗಿದೆ. ನಾನು ಇತ್ತ ಕಡೆ ಗಮನ ಹರಿಸುತ್ತಿರುತ್ತೇನೆ. ಅಲ್ಲಾಹನ ಆರಾಧನೆಯ ಹಕ್ಕು ನಾವು ನಮಾಝ್‌ಗಳನ್ನು ನಿರ್ವಹಿಸುವುದರಿಂದ ಸಾಧ್ಯ. ಆದ್ದರಿಂದ ಪ್ರತಿಯೊರ್ವ ಅಹ್ಮದಿಯು ತಮ್ಮ ನಮಾಝ್‌ಗಳನ್ನು ಸಂರಕ್ಷಿಸಿಕೊಳ್ಳಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ಯಾರ ಮನಸ್ಸು ಕೆಡಕಿನಿಂದ ತುಂಬಿದೆಯೋ ಮತ್ತು ಯಾರು ಅಲ್ಲಾಹನ ದಿವ್ಯ ಜ್ಞಾನದಿಂದ ಮತ್ತು ಅಲ್ಲಾಹನ ಸಾಮಿಪ್ಯದಿಂದ ದೂರ ಇದ್ದಾನೋ ಅವನನ್ನು ಶುದ್ಧಗೊಳಿಸುವುದಕ್ಕೆ ಮತ್ತು ಅಲ್ಲಾಹನ ಸಾಮಿಪ್ಯಗೊಳಿಸುವುದಕ್ಕೆ ನಮಾಝ್ ಇದೆ. ನಮಾಝಿನ ಮೂಲಕ ಆ ಎಲ್ಲಾ ಕೆಡುಕುಗಳನ್ನು ದೂರಗೊಳಿಸಿ ಅದರ ಜಾಗದಲ್ಲಿ ಒಳಿತನ್ನು ತುಂಬಲಾಗುತ್ತದೆ. ನಮಾಝ್ ಎಲ್ಲಾ ಕೆಡುಕುಗಳನ್ನು ದೂರಗೊಳಿಸುತ್ತದೆ ಎಂದು ಹೇಳುವುದಕ್ಕೆ ಮೂಲ ಉದ್ದೇಶವಾಗಿದೆ. **(ಮಲ್‌ಫೂಝಾತ್, ಸಂಪುಟ-5, ಪುಟ-93, 2003ರ ಪ್ರಕಟಣೆ, ಖಾದಿಯಾನ್)**

ಆದ್ದರಿಂದ ತಾವೆಲ್ಲರು ತಮ್ಮ ನಮಾಝ್‌ಗಳನ್ನು ಸಂರಕ್ಷಿಸಿಕೊಳ್ಳಿರಿ ಮತ್ತು ತಮ್ಮ ಪೀಳಿಗೆಗಳಿಗೂ ಸಹ ನಮಾಝ್ ಅನುಷ್ಠಿಸಲು ಪ್ರೇರೇಪಿಸಿರಿ. ಎಲ್ಲಿಯ ತನಕ ತಾವೆಲ್ಲರು ಸ್ವತಃ ನಮಾಝ್‌ಗಳನ್ನು ನಿರ್ವಹಿಸುವುದಿಲ್ಲವೋ ತಮ್ಮ ಕರ್ಮಗಳೊಂದಿಗೆ ತೋರುವುದಿಲ್ಲವೋ ಅಲ್ಲಿಯ ತನಕ ನಿಮ್ಮ ಪೀಳಿಗೆಯು ಸಹ ನಮಾಝ್‌ಗಳನ್ನು ನಿರ್ವಹಿಸುವುದಿಲ್ಲ. ಒಂದು ವೇಳೆ ತಾವೆಲ್ಲರು ನಮಾಝ್ ನಿರ್ವಹಿಸುವವರಾಗಿದ್ದಲ್ಲಿ ನೀವು ನಿಮ್ಮ ಪೀಳಿಗೆಗಳನ್ನು ಸಹ ನಮಾಝ್ ನಿರ್ವಹಿಸುವವರಾಗಿಸಲು ಸಾಧ್ಯ. ನಿಮ್ಮ ಎಲ್ಲಾ ತರಬೇತಿಯ ಸಮಸ್ಯೆಗಳು ಬಗೆಹರಿಯುವುವು.

ಆತ್ಮ ಸುಧಾರಣೆಯು ಒಂದು ಜಿಹಾದ್ ಆಗಿದೆ. ಅದು ಸತತವಾಗಿ ಮಾಡುತ್ತಿರಬೇಕು. ಯಾವಾಗಲು ತಮ್ಮನ್ನು ಪರಿಶೀಲಿಸುತ್ತಿರಬೇಕು. ಅಲ್ಲಾಹನು ನಿಮ್ಮೆಲ್ಲರಿಗೂ ತಮ್ಮಲ್ಲಿ ಶುದ್ಧ ಪರಿವರ್ತನೆಗಳನ್ನು ಹೊಂದುವ ಸೌಭಾಗ್ಯ ನೀಡಲಿ. ನಿಮ್ಮನ್ನು ಹಝ್ರತ್ ಮಸೀಹ್‌ಮೌಊದ್ ಅಲೈಹಿಸ್ಸಲಾಮ್ ಅವರ ಪ್ರಾರ್ಥನೆಗಳ ವಾರಿಸುದಾರರನ್ನಾಗಿ ಮಾಡಲಿ ಮತ್ತು ಯಾವಾಗಲು ದೀನನ್ನು ದುನಿಯಾದ ಮೇಲಿರಿಸುವ ಸೌಭಾಗ್ಯ ನೀಡಲಿ ಆಮೀನ್.

ವಸ್ಸಲಾಮ್

ಮಿರ್ಝಾ ಮಸ್‌ರೂರ್ ಅಹ್ಮದ್

**ಖಲೀಫತುಲ್ ಮಸೀಹ್ ಖಾಮಿಸ್**

# ಜುಮುಅ ಖುತ್‌ಬ

**ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವರು.......... ಹೇಳಿದರು: ಓ ಇಬ್ನು ರವಾಹ! ಅಲ್ಲಾಹನು ತಮ್ಮನ್ನು ಸ್ಥಿರತೆಯುಳ್ಳವರನ್ನಾಗಿ ಮಾಡಲಿ. ಹಿಶಾಮ್ ಬಿನ್ ಉರ್ವ ಹೇಳಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ದುಆದ ಅನುಗ್ರಹದಿಂದ ಅಲ್ಲಾಹನು ಅವರನ್ನು ಸ್ಥಿರ ಹೆಜ್ಜೆಯುಳ್ಳವರನ್ನಾಗಿ ಮಾಡಿದನು ಮತ್ತು ಅವರು ಕೊನೆಗೆ ಶಹೀದರಾದರು. ಅವರಿಗೆ ಸ್ವರ್ಗದ ಬಾಗಿಲು ತೆರೆಯಲ್ಪಟ್ಟಿತು. ಅದರಲ್ಲಿ ಅವರು ಶಹೀದರಾಗಿ ಪ್ರವೇಶಿಸಿದರು.**

**ನಿಷ್ಠೆ ಮತ್ತು ಆತ್ಮೀಯತೆಯ ಮೂರ್ತಿರೂಪರಾಗಿದ್ದ ಬದರಿ ಸಹಾಬಿಯಾದ ಹಝ್ರತ್ ಅಬ್ದುಲ್ಲಾ ಬಿನ್ ರವಾಹ ರಝಿಯಲ್ಲಾಹು ಅನ್ಹುರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

**ರಬ್ವಹ್‌ದ ಫಝ್ಲೆ ಉಮರ್ ಆಸ್ಪತ್ರೆಯಲ್ಲಿ 50 ವರ್ಷಗಳ ಸುದೀರ್ಘ ಕಾಲ ಸೇವೆ ಸಲ್ಲಿಸಿರುವ, ಬಡವರ ಬಂಧು ಮುಕರ್‍ರಮ ಲತೀಫ್ ಖುರೈಶಿ ಸಾಹೆಬ ಅವರ ಸದ್ಗುಣಗಳ ಪ್ರಸ್ತಾವನೆ ಹಾಗೂ ಜುಮ್‌ಆ ನಮಾಝ್‌ನ ನಂತರ ಅವರ ನಮಾಝೆ ಜನಾಝ ಗಾಯಿಬ್ ನಿರ್ವಹಣೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫತೂಹ್'** ಮಸೀದಿಯಲ್ಲಿ **24–01–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِينَ ۔ اَلرَّحْمٰنِ الرَّحِيمِ ۔ مٰلِكِ يَوْمِ الدِّينِ ۔

إِيَّاكَ نَعْبُدُ وَإِيَّاكَ نَسْتَعِينُ ۔ اِهْدِنَا الصِّرَاطَ الْمُسْتَقِيمَ ۔

صِرَاطَ الَّذِينَ أَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّالِّينَ ۔

ಇಂದು ನಾನು ಪ್ರಸ್ತಾಪಿಸುವ ಬದರಿ ಸಹಾಬಿಯ ಹೆಸರು ಹಝ್ರತ್ ಅಬ್ದುಲ್ಲಾ ಬಿನ್ ರವಾಹ(ರ). ಹಝ್ರತ್ ಅಬ್ದುಲ್ಲಾ(ರ) ಅವರ ತಂದೆಯ ಹೆಸರು ರವಾಹ ಬಿನ್ ಸಅಲಬ ಎಂದಾಗಿತ್ತು ಮತ್ತು ಅವರ ತಾಯಿಯ ಹೆಸರು ಕಬ್‌ಶ ಬಿನ್ತ್ ವಾಖಿದ್ ಬಿನ್ ಅಮರ್ ಆಗಿತ್ತು. ಅವರು ಅನ್‌ಸಾರ್‌ಗಳ ಖಝ್‌ರಜ್ ಗೋತ್ರದ ಬನೂ ಹಾರಿಸ್ ಬಿನ್ ಖಝ್‌ರಜ್ ಕುಟುಂಬದವರಾಗಿದ್ದರು. ಹಝ್ರತ್ ಅಬ್ದುಲ್ಲಾ ಬಿನ್ ರವಾಹ(ರ) ಬೈಅತ್ ಅಖಬದಲ್ಲಿ ಭಾಗವಹಿಸಿದ್ದರು. ಅವರು ಬನೂ ಹಾರಿಸ್ ಬಿನ್ ಖಝ್‌ರಜ್ ಕುಟುಂಬದ ಮುಖಂಡರಾಗಿದ್ದರು. ಅವರ ಉಪನಾಮ ಅಬೂ ಮುಹಮ್ಮದ್ ಎಂದಾಗಿತ್ತು. ಬೇರೆ ಕೆಲವರು ಅವರ ಉಪನಾಮ ಅಬೂ ರವಾಹ ಎಂದೂ ಅಬೂ ಅಮರ್ ಎಂದೂ ಹೇಳಿದ್ದಾರೆ. (ಉಸದುಲ್ ಗಾಬ ಸಂಪುಟ–3, ಪುಟ–235, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2008)

ಅನ್‌ಸಾರ್‌ಗಳಲ್ಲಿ ಒಬ್ಬರು ಹೇಳಿದರು: ಹಝ್ರತ್ ಅಬ್ದುಲ್ಲಾ ಮತ್ತು ಹಝ್ರತ್ ಮಿಖ್‌ದಾದ್ ಮಧ್ಯೆ ಸಹೋದರ ಸಂಬಂಧವನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ಥಾಪಿಸಿದ್ದರು. ಇಬ್ನು ಸಅದ್ ಹೇಳುತ್ತಾರೆ ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬರಹಗಾರರೂ ಆಗಿದ್ದರೆಂದು. (ಅಲ್ ಅಸಾಬ ಫೀ ತಮೀಝಿಸ್ಸಹಾಬ ಸಂಪುಟ–4, ಪುಟ–73, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2005)

ಹಝ್ರತ್ ಅಬ್ದುಲ್ಲಾ ಬಿನ್ ರವಾಹ(ರ) ಅವರು ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವ ಸಲ್ಲಮರೊಂದಿಗೆ ಬದರ್, ಉಹುದ್, ಖಂದಖ್, ಹುದೈಬಿಯ, ಖೈಬರ್ ಮತ್ತು ಉಮ್‌ರತುಲ್ ಖಝಾ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಮೂತ ಯುದ್ಧದಲ್ಲಿ ಶಹೀದರಾದರು. ಮೂತ ಯುದ್ಧದ ದಳಪತಿಗಳಲ್ಲಿ ಅವರು ಒಬ್ಬರಾಗಿದ್ದರು.

ಒಂದು ವರದಿ ಹೀಗಿದೆ: ಒಮ್ಮೆ ಹಝ್ರತ್ ಅಬ್ದುಲ್ಲಾ ಬಿನ್ ರವಾಹ(ರ) ಮಸ್‌ಜಿದ್ ಕಡೆಗೆ ಹೊರಟಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖುತ್‌ಬ ನೀಡುತ್ತಿದ್ದರು. ಅವರು ಖುತ್‌ಬದ ಮಧ್ಯೆ 'ಕುಳಿತುಕೊಳ್ಳಿ' ಎಂದು ಹೇಳಿದಾಗ ತಕ್ಷಣ ಹಝ್ರತ್ ಅಬ್ದುಲ್ಲಾ ಮಸ್‌ಜಿದ್ ಹೊರಗೆ ತಾವು ನಿಂತಿದ್ದ ಸ್ಥಳದಲ್ಲಿ ಕುಳಿತುಬಿಟ್ಟರು. ಖುತ್‌ಬ ಮುಕ್ತಾಯಗೊಂಡ ನಂತರ ಈ ಸಮಾಚಾರ ತಿಳಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: **ಝಾದಕಲ್ಲಾಹು ಹರ್‌ಸನ್ ಅಲಾ ತವಾಅತಿಲ್ಲಾಹಿ ವ ತವಾಅತಿರಸೂಲಿಹೀ** – ಅಲ್ಲಾಹನನ್ನು ಅನುಸರಿಸುವ ಬಗ್ಗೆ ಮತ್ತು ಅವನ ಸಂದೇಶವಾಹಕನನ್ನು ಅನುಸರಿಸುವ ಬಗ್ಗೆ ನಿನಗಿರುವ ಅಭಿಲಾಷೆಯನ್ನು ಅಲ್ಲಾಹನು ವರ್ಧಿಸಲಿ. ಇದೇ ರೀತಿಯ ಘಟನೆ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದರ ಬಗ್ಗೆಯೂ ಹದೀಸು ಗ್ರಂಥಗಳಲ್ಲಿ ವಿವರಿಸಲಾಗಿದೆ. ಆ ಘಟನೆಯನ್ನು ನಾನು ನನ್ನ ಒಂದು ಖುತ್‌ಬದಲ್ಲಿ ವಿವರಿಸಿದ್ದೇನೆ. ಅಬ್ದುಲ್ಲಾ ಬಿನ್ ಮಸ್‌ಊದ್(ರ) ಅವರ ಬಗ್ಗೆ ಹೀಗೆ ವರದಿ ಆಗಿದೆ. ಅವರು ಸಹ ಹೊರಗಡೆ ಕುಳಿತುಕೊಂಡಿದ್ದರು, ಇದನ್ನು ಕೇಳಿದ ತಕ್ಷಣವೇ ಅವರು ಮಸೀದಿಯ ಬಾಗಿಲಲ್ಲೇ ಕುಳಿತುಕೊಂಡರು ಹಾಗೇ ಕುಳಿತುಕೊಂಡ ಸ್ಥಿತಿಯಲ್ಲೆ ಒಳಗೆ ಪ್ರವೇಶಿಸಿದರು.

ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಜಿಹಾದಿಗೆ ಮನೆಯಿಂದ ಎಲ್ಲರಿಗಿಂತ ಮೊದಲು ಹೊರಡುವವರಾಗಿದ್ದರು ಮತ್ತು ಎಲ್ಲರಿಗಿಂತ ಕೊನೆಯದಾಗಿ ಮರಳಿ ಬರುತ್ತಿದ್ದರು. ಹಝ್ರತ್ ಅಬೂ ದರ್ದಾ(ರ) ಹೇಳುತ್ತಾರೆ: ಹಝ್ರತ್ ಅಬ್ದುಲ್ಲಾ ಬಿನ್ ರವಾಹರನ್ನು ಸ್ಮರಿಸದಿರುವ ದಿನದ ಬಗ್ಗೆ ನಾನು ಅಲ್ಲಾಹನ ಅಭಯಯಾಚಿಸುತ್ತೇನೆ. ಅವರು ನನ್ನ ಮುಂದೆ ಬರುವಾಗ ನನ್ನ ಎದೆಯ ಮೇಲೆ ಕೈಯಿಡುತ್ತಿದ್ದರು. ಅವರು ಹೋಗುವಾಗ ನನ್ನ ಭುಜಗಳ ಮಧ್ಯೆ ಕೈ ಇರಿಸುತ್ತಿದ್ದರು. ಮತ್ತು ಹೇಳುತ್ತಿದ್ದರು: **ಯಾ ಉವೈಮಿರ್ ಇಜ್‌ಲಿಸ್ ಫಲ್‌ನುಅ್‌ಮಿನ್ ಸಾಅತನ್** – ಓ ಉವೈಮಿರ್ ಕುಳಿತುಕೊಳ್ಳು ಸ್ವಲ್ಪ ಹೊತ್ತು ನಮ್ಮ ಈಮಾನ್ ತಾಜಾ ಮಾಡೋಣ. ನಾವು ಕುಳಿತುಕೊಂಡು ಅಲ್ಲಾಹನು ಇಚ್ಛಿಸುವಷ್ಟು ಕಾಲ ಅಲ್ಲಾಹನನ್ನು ಸ್ಮರಿಸುತ್ತಿದ್ದೆವು. ಅನಂತರ ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಹೇಳುತ್ತಿದ್ದರು: ಇವು ಈಮಾನಿನ ಸಭೆಗಳಾಗಿವೆ. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಸಂಪುಟ–3, ಪುಟ–235–236, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2008, ಅಲ್ ಇಸ್ತಿಯಾಬ್ ಫೀ ಮಾರಿಫತಿಲ್ ಅಸ್‌ಹಾಬ್ ಸಂಪುಟ–3, ಪುಟ–34, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2010, ಸನನ್ ಅಬುದಾಊದ್ ಕಿತಾಬುಸ್ಸಲಾತ್ ಹದೀಸ್–1091)

ಹಝ್ರತ್ ಇಮಾಮ್ ಅಹ್ಮದ್ "ಕಿತಾಬು ಝ್ಝುಹದ್" ಎಂಬ ಗ್ರಂಥದಲ್ಲಿ ಹೇಳುತ್ತಾರೆ: ಹಝ್ರತ್ ಅಬ್ದುಲ್ಲಾ ಬಿನ್ ರವಾಹ(ರ) ಯಾವಾಗಲಾದರೂ ತನ್ನ ಸಂಗಡಿಗರನ್ನು ಕಾಣುವಾಗ ಹೇಳುತ್ತಿದ್ದರು, ನಾವು ಒಂದು ತಾಸು ಕುಳಿತುಕೊಂಡು ಅಲ್ಲಾಹನ ಬಗ್ಗೆ ನಮ್ಮ ವಿಶ್ವಾಸವನ್ನು ತಾಜಾ ಮಾಡೋಣ. ಇದಕ್ಕೆ ಸಂಬಂಧಿಸಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅಲ್ಲಾಹನು ಇಬ್ನು ರವಾಹ್ ಮೇಲೆ ಕಾರುಣ್ಯ ದೋರಲಿ. ದೇವದೂತರು ಹೆಮ್ಮೆಪಡುವ ಸಭೆಗಳ ಬಗ್ಗೆ ಅವರಿಗೆ ಪ್ರೀತಿ ಇತ್ತು.

ಹಝ್ರತ್ ಅಬೂ ಹುರೈರ[ರ] ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: **ನಿಅ್‌ಮರ್ರಜಲು ಅಬ್ದುಲ್ಲಾಹಿಬ್ನು ರವಾಹ್** – ಅಬ್ದುಲ್ಲಾಹಿಬ್ನು ರವಾಹ್ ಎಷ್ಟು ಉತ್ತಮ ಪುರುಷರಾಗಿದ್ದಾರೆ. ಖೈಬರ್ ಜಯಿಸಿದ ನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬ್ದುಲ್ಲಾ ಬಿನ್ ರವಾಹರನ್ನು ಅಲ್ಲಿನ ತೋಟಗಳ ಬೆಳೆಗಳನ್ನು ಅಂದಾಜು ಮಾಡಲು ಕಳುಹಿಸಿದ್ದರು. ಒಮ್ಮೆ ಹಝ್ರತ್ ಅಬ್ದುಲ್ಲಾ ತೀವ್ರವಾಗಿ ರೋಗ ಬಾಧಿತರಾಗಿ ಮೂರ್ಛೆ ಹೋದರು. ಹಝ್ರತ್ ನಬಿ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಸಂದರ್ಶಿಸಲು ಹೋದರು. ಅವರು ಪ್ರಾರ್ಥಿಸಿದರು: ಓ ಅಲ್ಲಾಹ್, ಅವನ ಅಂತಿಮ ತಾಸು ಆಸನ್ನವಾಗಿದ್ದರೆ ಅವನಿಗೆ ಸುಲಭಗೊಳಿಸು. ಅವನ ನಿಗದಿತ ತಾಸು ಆಸನ್ನವಾಗಿಲ್ಲದಿದ್ದರೆ ಅವನಿಗೆ ರೋಗೋಪಶಮನ ನೀಡು. ಈ ಪ್ರಾರ್ಥನೆಯ ನಂತರ ಹಝ್ರತ್ ಅಬ್ದುಲ್ಲಾ ತನ್ನ ಜ್ವರ ಕಡಿಮೆಯಾಗಿರುವುದಾಗಿ ಮನವರಿಕೆ ಮಾಡಿದರು. ಅವರು ಹೇಳಿದರು: ಯಾ ರಸೂಲುಲ್ಲಾಹ್, ನನ್ನ ತಾಯಿ 'ಹಾಯ್ ಓ ಪರ್ವತದ ಹಾಗಿರುವ ನನ್ನ ಆಶ್ರಯದಾತನೆ' ಎಂದು ನಾನು ರೋಗಿಯಾಗಿದ್ದಾಗ ಹೇಳುತ್ತಿದ್ದರು. ಆಗ ನಾನು ನೋಡಿದೆ, ಒಬ್ಬ ದೇವದೂತ ಕಬ್ಬಿಣದ ಗದೆ ಎತ್ತಿ ಹಿಡಿದು ನಿಂತು ಹೇಳುತ್ತಿದ್ದರು,
ನೀವು ವಾಸ್ತವಿಕವಾಗಿ ನಿನ್ನ ತಾಯಿ ಹೇಳುವ ಹಾಗೆ ಇರುವಿಯೋ. ನಾನು 'ಹೌದು ಹಾಗೆಯೇ ಆಗಿದ್ದೇನೆ' ಎಂದು ಹೇಳುತ್ತಿದ್ದರೆ ದೇವದೂತ ನಿಶ್ಚಯವಾಗಿಯೂ ನನ್ನನ್ನು ಆ ಆಯುಧದಿಂದ ಹೊಡೆಯುತ್ತಿದ್ದರು.

ಇನ್ನೊಂದು ವರದಿಯಲ್ಲಿ ಇದರ ಬಗ್ಗೆ ಹೀಗೆ ವರದಿ ಆಗಿದೆ. ಈ ವರದಿಯು ಹೆಚ್ಚು ಸರಿ ಎಂದೆನಿಸುತ್ತದೆ. ಹೇಳುತ್ತಾರೆ ಓರ್ವ ದೇವದೂತನು ಕಬ್ಬಿಣದ ಗದೆ ಎತ್ತಿಹಿಡಿದು ನಿಂತು ನನ್ನೊಂದಿಗೆ ಹೀಗೆ ಪ್ರಶ್ನಿಸುತ್ತಿದ್ದನು ನನ್ನ ತಾಯಿ ಹೇಳುವ ಹಾಗೆ ಇರುವೆಯೊ? ಅಂದರೆ ನೀನು ನನ್ನ ಪರ್ವತದ ಹಾಗಿರುವೆ ಮತ್ತು ನನ್ನ ಆಶ್ರಯದಾತನೆ? ಇದು ಶಿರ್ಕ್ ಆಗಿರುವುದು. ಹಝ್ರತ್ ಅಬ್ದುಲ್ಲಾ ಬಿನ್ ರವಾಹ(ರ) ಹೇಳುತ್ತಾರೆ ಒಂದು ವೇಳೆ ನಾನು ಹೌದು ಎಂದು ಹೇಳುತ್ತಿದ್ದರೆ ಅವನು ಖಂಡಿತವಾಗಿ ನನಗೆ ಹೊಡೆಯುತ್ತಿದ್ದನು. (ಅತ್ತಬಖಾತುಲ್ ಕುಬ್ರ ಸಂಪುಟ–2, ಪುಟ–417, ದಾರುಲ್ ಫಿಕರ್ ಬೈರೂತ್ 2012)

ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಕವಿಯೂ ಆಗಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಿಂದಿಸುತ್ತಿದ್ದ ಶತ್ರುಗಳಿಗೆ ಅವರು ಉತ್ತರ ನೀಡುತ್ತಿದ್ದರು. ಅದರ ಕೆಲವು ಪದ್ಯಗಳು ಹೀಗಿವೆ:

**ಇನ್ನಿ ತಫರ್ರಸ್ತು ಫೀಕಲ್ ಖೈರ ಅಅ್‌ರಿಫುಹು**
**ವಲ್ಲಾಹು ಯಅ್‌ಲಮು ಅನ್ ಮಾ ಖಾನನಲ್ ಬಸರು**
**ಅನ್ತನ್ನಬೀಯ್ಯು ವಮನ್ ಯುಹ್‌ರಮ್ ಶಫಾಅತುಹು**
**ಯವಮಲ್ ಹಿಸಾಬೆ ಫಖದ್ ಅಝ್‌ರಬಿ ಹಿಲ್ ಖದರು**
**ಫಸಬ್ಬತಲ್ಲಾಹು ಮಾ ಆತಾಕ ಮಿನ್ ಹಸನನ್**
**ತಸ್‌ಬೀತ ಮೂಸಾವನಸ್‌ರನ್ ಕಲ್ಲಝೀ ನುಸಿರುಹು**

ಅಂದರೆ ನಾನು ಹುಝೂರ್ ಸಲಲ್ಲಾಹು ಅಲೈಹಿವಸಲ್ಲಮರ ಪವಿತ್ರ ಜೀವನದಲ್ಲಿ ಒಳಿತನ್ನು ತಿಳಿದಿರುವೆನು ಮತ್ತು ಅಲ್ಲಾಹನು ನನ್ನ ದೃಷ್ಟಿ ಎಂದೂ ಮೋಸವಾಗುವುದಿಲ್ಲ ಎಂದು ತಿಳಿದಿರುತ್ತಾನೆ. ತಾವು[ಸ] ನಬಿ (ಸಂದೇಶವಾಹಕರಾಗಿದ್ದೀರಿ) ಆಗಿದ್ದೀರಿ. ಪ್ರಳಯದ ದಿವಸ ಯಾವೊರ್ವ ವ್ಯಕ್ತಿಯು ಹುಝೂರ್[ಸ] ಅವರ ಶೀಫಾರಿಸ್ಸಿನಿಂದ ವಂಚಿತನಾಗಿರುತ್ತನೊ ನಿಸ್ಸಂದೇಹವಾಗಿಂಯು ಪೂರ್ವಭಾವಿ ನಿರ್ಧಾರವು ಅವನನ್ನು ಅಪಮಾನಗೊಳಿಸುವುದು. ಆದ್ದರಿಂದ ಅಲ್ಲಾಹನು ಹಝ್ರತ್ ಮುಸಾ[ಅ] ಅವರನ್ನು ಯಾವ ರೀತಿ ಸ್ಥಿರವಾಗಿರಿಸಿದನೋ ಅದೇ ರೀತಿ ನಿಮಗೆ ನೀಡುವ ಆ ಒಳಿತಿನ ಮೇಲೆ ಸ್ಥಿರಗೊಳಿಸಲಿ ಮತ್ತು ನಿಮಗೂ ಪ್ರವಾದಿಗಳಿಗೆ ಸಹಾಯ ನೀಡಿದ ಹಾಗೆ ಸಹಾಯ ನೀಡಲಿ.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಒಂದು ಸಂದರ್ಭದಲ್ಲಿ ಅವರ ಪದ್ಯವನ್ನು ಆಲಿಸಿ ಹೇಳಿದರು: ಓ ಇಬ್ನು ರವಾಹ! ಅಲ್ಲಾಹನು ತಮ್ಮನ್ನು ಸ್ಥಿರತೆಯುಳ್ಳವರನ್ನಾಗಿ ಮಾಡಲಿ. ಹಿಶಾಮ್ ಬಿನ್ ಉರ್ವ ಹೇಳಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ದುಆದ ಅನುಗ್ರಹದಿಂದ ಅಲ್ಲಾಹನು ಅವರನ್ನು ಸ್ಥಿರ ಹೆಜ್ಜೆಯುಳ್ಳವರನ್ನಾಗಿ ಮಾಡಿದನು ಮತ್ತು ಅವರು ಕೊನೆಗೆ ಶಹೀದರಾದರು. ಅವರಿಗೆ ಸ್ವರ್ಗದ ಬಾಗಿಲು ತೆರೆಯಲ್ಪಟ್ಟಿತು. ಅದರಲ್ಲಿ ಅವರು ಶಹೀದರಾಗಿ ಪ್ರವೇಶಿಸಿದರು.

ಇಬ್ನು ಸಅದ್ ವರದಿ ಮಾಡುತ್ತಾರೆ: ಪವಿತ್ರ ಖುರ್‌ಆನಿನ ವಚನ, **ವಶ್ಶುಅರಾಉ ಯತ್ತಬಿಉಹುಮುಲ್ ಗಾಊನ್** (ಅಶ್ಶುಅರಾ: 225) ಕವಿಗಳಾದರೋ ಹಾದಿ ತಪ್ಪಿದವರು ಅವರನ್ನು ಅನುಸರಿಸುತ್ತಾರೆ. ಈ ವಚನ ಅವತೀರ್ಣವಾದಾಗ ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಹೇಳಿದರು: ಅಲ್ಲಾಹನಿಗೆ ಚೆನ್ನಾಗಿ ತಿಳಿದಿದೆ, ಯಾರ ಬಗ್ಗೆ ಅಲ್ಲಾಹನು **ಇಲ್ಲಲ್ಲಧೀನ ಆಮನೂ ವ ಆಮಿಲುಸ್ಸಾಲಿಹಾತ್** (ಅಶ್ಶೂರಾ: 228) ಸತ್ಯವಿಶ್ವಾಸಿಗಳಾಗಿ ಸತ್ಕರ್ಮ ಮಾಡುವವರ ಹೊರತು ಎಂದು ಹೇಳಿರುವನೋ ಅವರೊಂದಿಗೆ ನಾನು ಸೇರಿದವನಾಗಿರುವೆನು. ಮುಅ್‌ಜಮುಶ್ಶುಅರಾ ಎಂಬ ಗ್ರಂಥದ ಲೇಖಕ ಬರೆಯುತ್ತಾರೆ: ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಇಸ್ಲಾಮಿಗೆ ಮೊದಲು ಅಜ್ಞಾನದ ಕಾಲದಲ್ಲಿ ಸಹ ಬಹಳ ಗೌರವದ ಸ್ಥಾನ ಪಡೆದಿದ್ದರು. ಇಸ್ಲಾಮಿನ ಕಾಲದಲ್ಲಿಯೂ ಅವರಿಗೆ ಬಹಳ ಉನ್ನತ ಸ್ಥಾನ ಮತ್ತು ಪದವಿ ಲಭಿಸಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶ್ರೇಷ್ಠತೆ ಬಗ್ಗೆ ಒಂದು ಪದ್ಯ ಹಝ್ರತ್ ಅಬ್ದುಲ್ಲಾ ಬಿನ್ ರವಾಹ ರಚಿಸಿದ್ದಾರೆ. ಅದು ಅವರ ಪದ್ಯಗಳಲ್ಲಿ ಅತ್ಯುತ್ತಮವೆಂದು ಹೇಳಬಹುದು. ಆ ಪದ್ಯ ಅವರ ಹೃದಯದ ಸ್ಥಿತಿಯನ್ನು ಚೆನ್ನಾಗಿ ಪ್ರತಿಬಿಂಬಿಸುತ್ತದೆ. ಅವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸಂಬೋಧಿಸಿ ಹೇಳುತ್ತಾರೆ:

**ಲೌ ಲಮ್ ತಕುನ್ ಫೀಹಿ ಆಯತುನ್ ಮುಬೈಯ್ಯಿನತುನ್ ಕಾನತ್ ಬದೀಹತುಹು ತುಮ್‌ಬೀಕ ಬಿಲ್‌ಖಬರೆ**

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯತೆ ಬಗ್ಗೆ ಸ್ಪಷ್ಟವಾದ ದೃಷ್ಟಾಂತಗಳನ್ನು ಮತ್ತು ಪ್ರಕಾಶಮಾನವಾದ ಅದ್ಭುತ ಕೃತ್ಯಗಳನ್ನು ನೋಡದೆ ಇದ್ದರೂ ಅವರ ಸ್ವಂತ ವ್ಯಕ್ತಿತ್ವವೇ ಅವರ ಸತ್ಯತೆಗೆ ಸಾಕ್ಷ್ಯವಾಗಿ ಸಾಕಾಗಿದೆ. (ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಸಂಪುಟ–4, ಪುಟ–72ರಿಂದ75, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2005, ಉಸದುಲ್‌ಗಾಬ ಸಂಪುಟ–3, ಪುಟ–401, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಅಬ್ದುಲ್ಲಾ ಬಿನ್ ರವಾಹ[ರ] ಅಜ್ಞಾನ ಕಾಲದಲ್ಲಿಯೇ ಓದಲು ಬರೆಯಲು ಕಲಿತವರಾಗಿದ್ದರು. ಅ ಕಾಲದಲ್ಲಿ ಅರಬ್ ದೇಶದಲ್ಲಿ ಓದು ಬರಹ ಕಲಿತವರು ಬಹಳ ಕಡಿಮೆ ಇದ್ದರು. ಬದರ್ ಯುದ್ಧದಲ್ಲಿ ಜಯಗಳಿಸಿದ ನಂತರ ಅದರ ಬಗ್ಗೆ ಜನರಿಗೆ ಶುಭವಾರ್ತೆ ನೀಡಲು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬದರಿನ ರಣಾಂಗಣದಿಂದ ಹಝ್ರತ್ ಝೈದ್ ಬಿನ್ ಹಾರಿಸರನ್ನು ಮದೀನಕ್ಕೆ ಹಾಗೂ ಹಝ್ರತ್ ಅಬ್ದುಲ್ಲಾ ಬಿನ್ ರವಾಹರನ್ನು ಮದೀನದ ಮೇಲಿನ ಪ್ರದೇಶವಾದ ಅವಾಲಿಗೆ ಕಳುಹಿಸಿದರು. ಅವಾಲಿ ಮದೀನದ ಮೇಲ್ ಭಾಗದ ಪ್ರದೇಶವಾಗಿದೆ. ಇದರಲ್ಲಿ ಖುಬಾ ಹಾಗೂ ಮುಂತಾದ ಅನ್ಯ ಗೋತ್ರಗಳು ನೆಲೆಸಿದ್ದಾರೆ, ಅದಕ್ಕೆ ಹೇಳಲಾಗುತ್ತದೆ. ಹಝ್ರತ್ ಸಈದ್ ಬಿನ್ ಜುಬೈರ್‌ರಿಂದ ಹೀಗೆ ವರದಿಯಾಗಿದೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಕಅಬದ ಬಳಿಗೆ ಒಂಟೆಯ ಮೇಲೆ ಸವಾರಿ ಮಾಡುತ್ತಾ ಹೋದರು. ಅವರು ಬೆತ್ತದ ಮೂಲಕ ಹಜರುಲ್ ಅಸ್‌ವದನ್ನು ಚುಂಬಿಸಿದರು. ಅವರ ಜೊತೆಗೆ ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಸಹ ಇದ್ದರು. ಅವರು ಒಂಟೆಯ ಮೂಗು ದಾರವನ್ನು ಹಿಡಿದು ಹೀಗೆ ಪದ್ಯ ಹಾಡುತ್ತಿದ್ದರು.

**ಖಲ್ಲೂ ಬನಿಲ್ ಕುಫ್ಫಾರಿ ಅನ್ ಸಬೀಲಿಹ್**
**ನಹನೂ ಝುರಬ್‌ನಾಕುಮ್ ಅಲಾ ತಅ್‌ವೀಲಿಹ್**
**ಝುರ್‌ಬಯ್ಯುಝೀಲುಲ್‌ಹಾಮ ಅನ್ ಮಖೀಲಿಹ್**

ಅದರ ಭಾಷಾಂತರ ಹೀಗಿದೆ: ಓ ಅವಿಶ್ವಾಸಿಗಳೇ ನೀವು ಮಾರ್ಗದಿಂದ ದೂರ ಸರಿಯಿರಿ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮರಳಿದಾಗ ನಾವು ನಿಮಗೆ ಎಂತಹ ಹೊಡೆತ ನೀಡಿದೆವು ಎಂದರೆ ನಿಮ್ಮ ಶಿರಗಳನ್ನು ವಿಶ್ರಾಂತಿಯ ಸ್ಥಳದಿಂದ ದೂರ ಸರಿಸಿದೆವು.

ಹಝ್ರತ್ ಖೈಸ್ ಬಿನ್ ಅಬೂ ಹಾಝಮ್ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬ್ದುಲ್ಲಾ ಬಿನ್ ರವಾಹರೊಂದಿಗೆ ಹೇಳಿದರು, ಕೆಳಗೆ ಇಳಿಯಿರಿ ಮತ್ತು ನಮ್ಮ ಒಂಟೆಗಳನ್ನು ಚಲಿಸುವಂತೆ ಮಾಡಿರಿ ಅಂದರೆ ಕೆಲವು ಪದ್ಯಗಳನ್ನು ಹಾಡಿ ಒಂಟೆಗಳನ್ನು ವೇಗವಾಗಿ ಚಲಿಸುವ ಹಾಗೆ ಮಾಡಿರಿ ಅದನ್ನು ಹುದಿ ಎನ್ನುತ್ತಾರೆ. ಆಗ ಅವರು ಹೇಳಿದರು ಯಾ ರಸೂಲಲ್ಲಾಹ್! ನಾನು ಹೀಗೆ ಹಾಡುವುದನ್ನು ತ್ಯಜಿಸಿದ್ದೇನೆ. ಅದಕ್ಕೆ ಹಝ್ರತ್ ಉಮರ್[ರ] ಹೇಳಿದರು ನೀವು ಕೇಳಿರಿ ಮತ್ತು ಅನುಸರಿಸಿರಿ. ಅನಂತರ ಅಬ್ದುಲ್ಲಾ ಬಿನ್ ರವಾಹ[ರ] ಈ ಪದ್ಯಗಳನ್ನು ಹಾಡಿದರು:

**ಯಾ ರಬ್ಬಿ ಲೌಲಾ ಅನ್ತ ಮಹ್‌ತದೈನಾ**
**ವಲಾ ತಸದ್ದಖ್‌ನಾ ವಲಾ ಸಲ್ಲೈನಾ**
**ಫನ್‌ಝಿಲನ್ ಸಕೀನತನ್ ಅಲೈನಾ**
**ವಸಬ್ಬಿತಿಲ್ ಅಖ್‌ದಾಮ ಇನ್ ಲಾಖೈನಾ**
**ಇನ್ನಲ್ ಕುಫ್ಫಾರ ಖದ್ ಬಗೌಅಲೈನಾ**

ಆಲಾಪಿಸಿದ ಹಾಡಿನ ಅರ್ಥ ಹೀಗಿದೆ: ಓ ದೇವ, ಸಂರಕ್ಷಕ, ನೀನಿಲ್ಲದಿರುತ್ತಿದ್ದರೆ ನಾವು ಸನ್ಮಾರ್ಗ ಗಳಿಸುತ್ತಿರಲಿಲ್ಲ, ದಾನಧರ್ಮ ಮಾಡುತ್ತಿರಲಿಲ್ಲ, ನಮಾಝ್ ಮಾಡುತ್ತಿರಲಿಲ್ಲ. ನಮ್ಮ ಮೇಲೆ ಶಾಂತಿ

ಸಮಾಧಾನಗಳನ್ನು ಇಳಿಸು. ನಾವು ಶತ್ರುಗಳನ್ನು ಎದುರಿಸುವಾಗ ನಮ್ಮ ಹೆಜ್ಜೆಗಳನ್ನು ಸ್ಥಿರವಾಗಿರಿಸು. ಯಾಕೆಂದರೆ ಅವಿಶ್ವಾಸಿಗಳು ನಮ್ಮನ್ನು ಅಕ್ರಮಿಸುತ್ತಿದ್ದಾರೆ. ವಕೀ ಹೇಳುತ್ತಾರೆ:

**ಎನ್ ಅರಾದು ಫಿತ್‌ನತನ್ ಅಬೈನಾ**

ಅಂದರೆ ಅವರು ಕಿಡಿಗೇಡಿತನ ಎಸಗಿದರೆ ನಾವು ನಿರಾಕರಿಸುವೆವು. ಅಂದರೆ ಈ ಕಿಡಿಗೇಡಿತನವನ್ನು ನಿರಾಕರಿಸುವೆವು ಅದನ್ನು ತಡೆಯುವೆವು. ವರದಿಗಾರರು ಹೇಳುತ್ತಾರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಪ್ರಾರ್ಥಿಸಿದರು – ಓ ಅಲ್ಲಾಹ್, ಅವರ ಮೇಲೆ ಕಾರುಣ್ಯ ಸುರಿಸು. ಹಝ್ರತ್ ಉಮರ್[ರ] ಹೇಳಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರಾರ್ಥನೆಯ ಕಾರಣ ಅವರಿಗೆ ಕಾರುಣ್ಯ ದೊರಕುವುದು ಖಂಡಿತವಾಗಿದೆ.

ಹಝ್ರತ್ ಉಬಾದ ಬಿನ್ ಸಾಮಿತ್ ವರದಿ ಮಾಡುತ್ತಾರೆ: ಹಝ್ರತ್ ಅಬ್ದುಲ್ಲಾ ಬಿನ್ ರವಾಹ ರೋಗ ಬಾಧಿತರಾದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಸಂದರ್ಶಿಸಲು ಹೋದಾಗ ಹಝ್ರತ್ ಅಬ್ದುಲ್ಲಾರಿಗೆ ಹಾಸಿಗೆಯಿಂದ ಮೇಲೇಳಲು ಸಾಧ್ಯವಾಗಲಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನನ್ನ ಉಮ್ಮತ್ತಿನ (ಸಮುದಾಯದ) ಶಹೀದರು ಯಾರೆಲ್ಲಾ ಎಂದು ನಿಮಗೆ ತಿಳಿದಿದೆಯೇ? ಜನರು ಹೇಳಿದರು: ಮುಸ್ಲಿಮನು ಕೊಲ್ಲಲ್ಪಟ್ಟರೆ ಅವನು ಶಹೀದ್ ಆಗುತ್ತಾನೆ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅಷ್ಟು ಮಾತ್ರವಾದರೆ ಶಹೀದರ ಸಂಖ್ಯೆ ನನ್ನ ಸಮುದಾಯದಲ್ಲಿ ಬಹಳ ಕಡಿಮೆಯಾಗಿರುವುದು. ಅನಂತರ ಹೇಳಿದರು: ಮುಸ್ಲಿಮನು ಕೊಲ್ಲಲ್ಪಡುವುದು ಶಹಾದತ್ ಆಗಿದೆ. ಹೊಟ್ಟೆಯ ರೋಗದಿಂದ ಸಾಯುವುದು ಶಹಾದತ್ ಆಗಿದೆ. ನೀರಿನಲ್ಲಿ ಮುಳುಗಿ ಸಾಯುವುದು ಶಹಾದತ್ ಆಗಿದೆ. ಪ್ರಸವದ ಸಮಯದಲ್ಲಿ ಮಹಿಳೆ ಸಾಯುವುದು ಸಹ ಶಹಾದತ್ ಆಗಿದೆ. ಇವೆಲ್ಲಾ ಶಹಾದತಿನ ವಿವಿಧ ರೂಪಗಳಾಗಿವೆ. (ಅತ್ತಬಖಾತುಲ್ ಕುಬ್ರ ಸಂಪುಟ–3, ಪುಟ–398–400, ದಾರುಲ್ ಕುತುಬ್ ಇಲ್ಮಿಯ ಬೈರೂತ್ ಲೆಬನಾನ್ 1990, ಮುಜಮುಲ್ ಬಲದಾನ್ ಸಂಪುಟ–4, ಪುಟ–187, ಅತ್ತಬಖಾತುಲ್ ಕುಬ್ರ ಸಂಪುಟ–2, ಪುಟ–13, ದಾರುಲ್ ಕುತುಬ್ ಇಲ್ಮಿಯ ಬೈರೂತ್ 1990)

ಹಝ್ರತ್ ಉರ್ವ ಬಿನ್ ಝೈದ್ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮೂತ ಯುದ್ಧದ ಸಂದರ್ಭದಲ್ಲಿ ಹಝ್ರತ್ ಝೈದ್ ಬಿನ್ ಹಾರಿಸರನ್ನು ಸೇನಾಧಿಪತಿಯಾಗಿ ನೇಮಿಸಿ ಹೇಳಿದರು: ಅವರು ಶಹೀದರಾದರೆ ಹಝ್ರತ್ ಜಅಫರ್ ಬಿನ್ ಅಬೂ ತಾಲಿಬ್ ಅವರ ಸ್ಥಾನ ವಹಿಸುವರು. ಹಝ್ರತ್ ಜಅಫರ್ ಶಹೀದರಾದರೆ ಅಬ್ದುಲ್ಲಾ ಬಿನ್ ರವಾಹ ಸೇನಾಧಿಪತಿ ಆಗುವರು. ಹಝ್ರತ್ ಅಬ್ದುಲ್ಲಾ ಸಹ ಶಹೀದರಾದರೆ ಮುಸ್ಲಿಮರು ತಾವು ಇಚ್ಛಿಸುವವರನ್ನು ಸೇನಾಧಿಪತಿಯಾಗಿ ಮಾಡಿಕೊಳ್ಳಲಿ. ಅನಂತರ ಸೈನ್ಯವು ಸಿದ್ಧಗೊಳಿಸಲಾಯಿತು ಸೈನ್ಯವನ್ನು ಹೊರಡಲು ಆದೇಶಿಸಿದಾಗ ಜನರು ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರ ಸೇನಾಧಿಪತಿಗಳನ್ನು ಕಳುಹಿಸಿ ಅವರಿಗೆ ದುಆ ನೀಡಿದರು. ಜನರು ಹುಝೂರ್ ಸಲಲ್ಲಾಹು ಅಲೈಹಿವಸಲ್ಲಮರು ಸೇನಾಧಿಪತಿಗಳನ್ನು ಹಾಗೂ ಹಝ್ರತ್ ಅಬ್ದುಲ್ಲಾ ಬಿನ್ ರವಾಹ(ರ) ಅವರನ್ನು ಕಳುಹಿಸಿದಾಗ ಅವರು ಅಳುತ್ತಿದ್ದರು ಆಗ ಜನರು ಅವರಿಗೆ ಅಳುತ್ತಿರುವ ಕಾರಣ ಕೇಳಿದಾಗ ಅವರು ಹೇಳಿದರು ಅಲ್ಲಾಹನಾಣೆ ನನಗೆ ಲೌಕಿಕ ಪ್ರೀತಿ ಹಾಗೂ ಅದರ ಆಸೆ ಇಲ್ಲ ಬದಲಿಗೆ ನನಗೆ ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರು ಈ ರೀತಿ ಪವಿತ್ರ ಖುರ್‌ಆನಿನ ವಚನವನ್ನು ಪಠಿಸಿದ್ದನ್ನು ಆಲಿಸಿದ್ದೇನು. **ವಿನ್ ಮಿನ್‌ಕುಮ್ ಇಲ್ಲಾ ವಾರಿದುಹಾ ಕಾನ ಅಲಾ ರಬ್ಬಿಕ ಹತ್‌ಮಮ್ ಮಖ್‌ಝಿಯ್ಯ** (ಮರಿಯಮ್:72) ಅಂದರೆ ನಿಮ್ಮ ಪೈಕಿ ನರಕವನ್ನು ಹಾದು ಹೋಗದವರು ಯಾರೂ ಇಲ್ಲ, ಇದು ನಿಮ್ಮ ಪ್ರಭುವಿನ ಮೇಲೆ ಪೂರ್ಣಗೊಳಿಸಬೇಕಾದ ಕಡ್ಡಾಯ ಬಾಧ್ಯತೆ ಆಗಿದೆ. ಆದ್ದರಿಂದ ನನಗೆ ಅರಿವಿಲ್ಲ ನನ್ನ ನೇರ ಮಾರ್ಗವನ್ನು ಅನುಸರಿಸುವಲ್ಲಿ ನನ್ನ ಸ್ಥಿತಿ ಏನಾಗುವುದು ಎಂದು. ಇದಕ್ಕು ಮುಂಚೆ ಇರುವ ವಚನದಲ್ಲಿ ನರಕದ ಬಗ್ಗೆ ಪ್ರಸ್ತಾವನೆ ಇದೆ ಆದ್ದರಿಂದ ಅವರಿಗೆ ಭಯ ಹುಟ್ಟಿತು. ಇಲ್ಲದಿದ್ದರೆ ಬೇರೆಯ ವಚನಗಳಲ್ಲಿ ಸ್ಪಷ್ಟವಾಗಿದೆ ಮುಮಿನ್ ಮತ್ತು ಅಲ್ಲಾಹನ ಮಾರ್ಗದಲ್ಲಿ ಜಿಹಾದ್ ಮಾಡುವವರ ಬಗ್ಗೆ ಪ್ರಸ್ತಾವನೆ ಇದೆ. ಏನೇ ಇರಲಿ ಮುಸ್ಲಿಮರು ಹೇಳಿದರು ಅಲ್ಲಾಹನು ನಿಮ್ಮೊಟ್ಟಿಗಿದ್ದಾನೆ. ಅವನೇ ನಿಮ್ಮನ್ನು ನಮ್ಮ ಬಳಿ ಉತ್ತಮ ಸ್ಥಿತಿಯಲ್ಲಿ ಮರಳಿ ತರುವನು.

ತಫ್‌ಸೀರೆ ಸಗೀರಿನ ಅಡಿ ಟಿಪ್ಪಣಿಯಲ್ಲಿ ಹಾಗೂ ತಫ್‌ಸೀರೆ ಕಬೀರಿನಲ್ಲಿ ಇದರ ಬಗ್ಗೆ ಬರೆಯಲಾಗಿದೆ ಇದು ಮುಮಿನ್‌ಗಳಿಗೆ ಹೇಳಿರುವುದು ಅಲ್ಲ ಕಾಫಿರ್‌ಗಳಿಗೆ ಹೇಳಲಾಗಿದೆ. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಮತ್ತು ಹದೀಸ್‌ಗಳಲ್ಲಿ ಇದರ ವಿವರಣೆಯು ಪ್ರಸ್ತಾಪಿಸಲಾಗಿದೆ. ಅದರ ಸಾರಾಂಶ ಹೀಗಿದೆ ಇದು ತಫ್‌ಸೀರೆ ಸಗೀರಿನ ಅಡಿ ಟಿಪ್ಪಣಿಯಲ್ಲಿ ಬರೆಯಲಾಗಿದೆ: "ಪವಿತ್ರ ಖುರ್‌ಆನಿನಿಂದ ತಿಳಿದು ಬರುವುದೇನೆಂದರೆ ನರಕಗಳು ಎರಡು ರೀತಿಯಲ್ಲಿದೆ. ಒಂದು ಈ ಲೋಕದ ಇನ್ನೊಂದು ಪರಲೋಕದ ನರಕವಾಗಿದೆ. ಪ್ರತಿಯೊಬ್ಬ ವ್ಯಕ್ತಿ ನರಕ ಪ್ರವೇಶಿವನು ಎಂದು ವಿವರಿಸಲಾಗಿದೆ. ಅದರ ಅರ್ಥ ಮೂಮಿನ್ ಸಹ ಪ್ರವೇಶಿತ್ತಾರೆ ಎಂಬುದಲ್ಲ. ಬದಲಿಗೆ ಅದರ ಅರ್ಥ ಮುಮಿನ್‌ಗಳು ನರಕದ ಭಾಗವನ್ನು ಈ ಲೋಕದಲ್ಲಿ ಪಡೆಯುತ್ತಾರೆ ಎಂದು ವಿವರಿಸಲಾಗಿದೆ. ಅಂದರೆ ಕುಫ್ಫಾರ್‌ಗಳು ವಿವಿಧ ರೀತಿಯಲ್ಲಿ ತೊಂದರೆಗಳನ್ನು ನೀಡುತ್ತಾರೆ. ಮೂಮಿನ್‌ಗಳು ಪರಲೋಕದಲ್ಲಿ ಎಂದಿಗೂ ನರಕ ಪ್ರವೇಶಿಸುವುದಿಲ್ಲ. ಏಕೆಂದರೆ ಪವಿತ್ರ ಖುರ್‌ಆನಿನಲ್ಲಿ ಮೂಮಿನ್‌ಗಳ ಬಗ್ಗೆ ಹೀಗೆ ಪ್ರಸ್ತಾಪಿಸಲಾಗಿದೆ. **ಲಾ ಯಸ್‌ಮೂನ ಹಸೀಸಹಾ** ಅಂದರೆ ಮುಮಿನ್ ನರಕದಿಂದ ಎಷ್ಟು ದೂರವಿರುವರು ಎಂದರೆ ಅವರಿಗೆ ಅವರ ಸದ್ದು ಸಹ ಕೇಳಿಸುವುದಿಲ್ಲ. ಹಾಗಾಗಿ ಮೂಮಿನ್‌ಗಳು ನರಕ ಪ್ರವೇಶಿಸುವರು ಎಂಬುದರ ಅರ್ಥ ಅವರಿಗೆ ಲೋಕದಲ್ಲಿ ಬಹಳ ತೊಂದರೆಗಳನ್ನು ನೀಡಲಾಗುವುದು. ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರು ಜ್ವರವನ್ನು ಸಹ ಒಂದು ರೀತಿಯ ನರಕ ಎಂದು ಹೇಳಿದ್ದಾರೆ. ಹೇಳುತ್ತಾರೆ **ಅಲ್‌ಹುಮ್ಮ ಹಝ್ಝು ಕುಲ್ಲಿ ಮುಮಿನಿನ್ ಮಿನನ್ನಾರಿ** ಅಂದರೆ ಮೂಮಿನಿಗೆ ಜ್ವರ ನರಕದ ಅಗ್ನಿಯ ಒಂದು ಭಾಗ ಆಗಿದೆ. (ತಫ್‌ಸೀರೆ ಸಗೀರ್, ಮರಿಯಮ್:72)

ಹಝ್ರತ್ ಅಬ್ದುಲ್ಲಾ ಬಿನ್ ರವಾಹ[ರ] ಆ ಸಂದರ್ಭದಲ್ಲಿ ಹೀಗೆ ಹಾಡಿದರು:

**ಲಕಿನ್ನನಿ ಅಸ್‌ಅಲುರ್ರಹ್ಮಾನ ಮಗ್‌ಫಿರತನ್**
**ವಝರ್‌ಬತನ್ ಝಾತ ಫರ್‌ಗಿನ್ ಯಖ್‌ಝಿಫುಝ್ಝುಬದ**
**ಅಓ ತಾನತನ್ ಬಿಯದಾ ಹರ್ರಾನ ಮುಜ್‌ಹಿಝತನ್**
**ಬಿಹರ್‌ಬತಿನ್ ತುನ್‌ಫಿಝುಲ್ ಅಹ್‌ಶಾಅ ವಲ್‌ಕಬಿದ**
**ಹತ್ತಾ ಯಖೂಲು ಇಝಾ ಮರ್ರು ಅಲಾ ಜದಸಿ**
**ಯಾ ಅರ್‌ಶದಲ್ಲಾಹು ಮಿನ್ ಗಾಝಿನ್ ವಖದ್ ರಶದ**

ನಾನು ಕಾರುಣ್ಯ ನಿಧಿಯಾದ ಅಲ್ಲಾಹನಿಂದ ಮಗ್‌ಫಿರತನ್ನು ಬೇಡಿಕೊಳ್ಳುತ್ತೇನೆ. ಖಡ್ಗದಿಂದ ಎಂತಹ ಹೊಡೆತ ನೀಡುವ ಭಾಗ್ಯ ಆಶಿಸುತ್ತೇನೆಂದರೆ ಅದು ವಿಶಾಲವಾದ ಗಾಯ ಉಂಟು ಮಾಡುವಂತಹದ್ದು ಮತ್ತು ತಾಜಾ ರಕ್ತವನ್ನು ಹರಿಸುವಂತಹದು ಸಹ ಆಗಲಿ. ಅದರಿಂದ ನೊರೆ ಹೊರಬರುವಂತಾಗಲಿ. ಈಟಿಯಿಂದ ಎಂತಹ ಆಕ್ರಮಣ ಮಾಡಲು ಇಚ್ಛಿಸುತ್ತೇನೆಂದರೆ ರಕ್ತಪಿಪಾಸು ಮನುಷ್ಯನ ಕೈಯಿಂದಾಗುವ ಆಕ್ರಮಣದಂತಿರಬೇಕು. ಈಟಿ ಕರುಳುಗಳನ್ನೂ ಯಕೃತ್ತನ್ನೂ ಸೀಳಿ ದಾಟಿ ಹೊರಗೆ ಬರುವಂತಾಗಬೇಕು. ನನ್ನ ಗೋರಿಯ ಸಮೀಪದಿಂದ ದಾಟಿ ಹೋಗುವವರು ಹೀಗೆ ಹೇಳುವಂತಾಗಲಿ: ಯುದ್ಧದಲ್ಲಿ ಭಾಗವಹಿಸಿದ ನಿಮಗೆ ಅಲ್ಲಾಹನು ಒಳಿತನ್ನು ನೀಡಲಿ ಎಂದು. ಅಲ್ಲಾಹನು ಸಹ ಒಳಿತನ್ನು ನೀಡಿದವನಾಗಲಿ.

ಅನಂತರ ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಹೋದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಬಿಳ್ಕೊಟ್ಟರು. ಅನಂತರ ಆ ಸೈನ್ಯವು ಮುಆನ್ ಎಂಬ ಸ್ಥಳಕ್ಕೆ ತಲುಪಿದರು, ಮುಆನ್ ಸ್ಥಳವು ಸೀರಿಯಾದಲ್ಲಿ ಬಲಿಖುನ ನವಾಹನಲ್ಲಿ ಒಂದು ಪಟ್ಟಣವಾಗಿದೆ. ಅಲ್ಲಿ ತಲುಪಿದ ನಂತರ ತಿಳಿದಿದ್ದು ಏನೆಂದರೆ ಹರ್‌ಖಲ್ ಒಂದು ಲಕ್ಷ ರೂಮಿ ಹಾಗೂ ಒಂದು ಲಕ್ಷ ಅರಬ್ ಸೈನಿಕರೊಂದಿಗೆ ಮಾ ಎಂಬ ಸ್ಥಳದಲ್ಲಿರುವುದರ ಬಗ್ಗೆ ತಿಳಿಯಿತು. ಮಾ ಸಹ ಸಿರಿಯಾದ ಬಲಿಖಾನ ನವಾಹದ ಒಂದು ಪಟ್ಟಣವಾಗಿದೆ. ಮುಸ್ಲಿಮರು ಎರಡು ದಿವಸ ಮುಆನ್‌ನಲ್ಲಿ ತಂಗಿದರು. ರಸೂಲುಲಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರು ಶತ್ರುಗಳ ಬಗ್ಗೆ ತಿಳಿಸ ಬೇಕೆಂದು ಪರಸ್ಪರ ಮಾತನಾಡಿಕೊಂಡರು. ಆದರೆ ಅಬ್ದುಲ್ಲಾ ಬಿನ್ ರವಾಹ[ರ] ಮುಸ್ಲಿಮರನ್ನು ಉತ್ಸಾಹಗೊಳಿಸಿದರು. ಆದ್ದರಿಂದ ಮುಸ್ಲಿಮೇತರ ಸೈನಿಕರು ಕೇವಲ ಮೂರು ಸಾವಿರ ಇದ್ದರು ಮುಂದಾಗಿ ರೂಮಿ ಸೈನಿಕರನ್ನು ಮಶಾರಿಫ್ ಎಂಬ ಸ್ಥಳದಲ್ಲಿ ಭೇಟಿ ಆದರು. ಅನಂತರ ಮುಸ್ಲಿಮರು ಮೂತ ಕಡೆ ಸಾಗಿದರು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಸಂಪುಟ–3, ಪುಟ–237, ದಾರುಲ್ ಕುತುಬ್ ಇಲ್ಮಿಯ ಬೈರೂತ್ ಲೆಬನಾನ್ 2008) (ತಫ್ಸೀರೆ ಸಗೀರ್ ಸೂರ ಮರಿಯಮ್ ವಚನ 72, ಪುಟ–390, ಉಸದುಲ್‌ಗಾಬ(ಅನುವಾದ) ಭಾಗ–5, ಪುಟ–247, ಲಾಹೋರ್, ಮುಜಮುಲ್ ಬಲದಾನ್ ಸಂಪುಟ–5, ಪುಟ–179,37,153–154)

ಹಝ್ರತ್ ಅನಸ್[ರ] ವರದಿ ಮಾಡುತ್ತಾರೆ ಹಝ್ರತ್ ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವ ಸಲ್ಲಮರು ಹಝ್ರತ್ ಝೈದ್[ರ], ಹಝ್ರತ್ ಜಾಫರ್[ರ] ಹಾಗೂ ಹಝ್ರತ್ ಅಬ್ದುಲ್ಲಾ ಬಿನ್ ರವಾಹ[ರ] ಒಬ್ಬರ ನಂತರ ಇನ್ನೊಬ್ಬರು ಶಹೀದ್ ಆಗಿರುವ ಬಗ್ಗೆ ಜನರು ತಿಳಿಸಿದರು. ಈ ಸುದ್ದಿ ಜನರು ತಿಳಿಸುವುದಕ್ಕೆ

ಮುಂಚೆ ಅಲ್ಲಾಹನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಝೈದ್, ಹಝ್ರತ್ ಜಅಫರ್ ಮತ್ತು ಹಝ್ರತ್ ಅಬ್ದುಲ್ಲಾ ಬಿನ್ ರವಾಹರ ಶಹಾದತ್ ಬಗ್ಗೆ ಸಮಾಚಾರ ಜನರಿಗೆ ನೀಡಿದರು. ಅವರು ಹೇಳಿದರು: ಝೈದ್ ಪತಾಕೆ ತೆಗೆದು ಕೊಂಡಿದ್ದರು. ಅವರು ಶಹೀದರಾದರು. ಅನಂತರ ಜಅಫರ್ ಪತಾಕೆ ತೆಗೆದುಕೊಂಡರು. ಅವರು ಸಹ ಶಹೀದರಾದರು. ಅನಂತರ ಅಬ್ದುಲ್ಲಾ ಬಿನ್ ರವಾಹ ತೆಗೆದುಕೊಂಡರು. ಅವರು ಸಹ ಶಹೀದರಾದರು. ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಣ್ಣುಗಳಿಂದ ಅಶ್ರುಧಾರೆ ಸುರಿಯುತ್ತಿತ್ತು. ಅವರು ಹೇಳಿದರು: ಅನಂತರ ಪತಾಕೆಯನ್ನು ಅಲ್ಲಾಹನ ಖಡ್ಗಗಳಲ್ಲಿ ಒಂದು ಖಡ್ಗ ಎತ್ತಿಕೊಂಡಿತು. ಕೊನೆಗೆ ಅಲ್ಲಾಹನು ಅವರ ಮೂಲಕ ಜಯ ನೀಡಿದನು. (ಸಹೀಹ್ ಬುಖಾರಿ ಕಿತಾಬುಲ್ ಮಗಾಝಿ ಹದೀಸ್-4262)

ಹಝ್ರತ್ ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರು ತಾವು ಹಝ್ರತ್ ಝೈದ್ ಬಿನ್ ಹಾರಿಸ್(ರ), ಹಝ್ರತ್ ಜಅಫರ್(ರ) ಹಾಗೂ ಹಝ್ರತ್ ಅಬ್ದುಲ್ಲಾ ಬಿನ್ ರವಾಹ(ರ) ಅವರ ಶಹಾದತ್‌ನ ಬಗ್ಗೆ ಸಮಾಚಾರ ತಿಳಿದಾಗ ಹುಝೂರ್(ಸ) ಅವರು ಈ ಪರಿಸ್ಥಿತಿಯನ್ನು ಪ್ರಸ್ತಾಪಿಸಲು ನಿಂತಿದರು. ಹಝ್ರತ್ ಝೈದ್(ರ) ಅವರ ಬಗ್ಗೆ ಪ್ರಾರಂಭಿಸಿದರು. ಹುಝೂರ್(ಸ) ನುಡಿಯುತ್ತಾರೆ:

**ಅಲ್ಲಾಹುಮ್ಮಗ್‌ಫಿರ್ ಲಿಝಯದಿನ್, ಅಲ್ಲಾಹುಮ್ಮಗ್ಫಿರ್ ಲಿಝೈದಿನ್, ಅಲ್ಲಾಹುಮ್ಮಗ್‌ಫಿರ್ ಲಿಝೈದಿನ್, ಅಲ್ಲಾಹುಮ್ಮಗ್‌ಫಿರ್ ಲಿಜಅಫರಿನ್ ವ ಲಿಅಬ್ದಿಲ್ಲಾಹಿಬ್‌ನೆ ರವಾಹ** ಅಂದರೆ ಓ ಅಲ್ಲಾಹನೇ! ಝೈದನಿಗೆ ಮಫ್‌ಫಿರತ್ ದಯಪಾಲಿಸು, ಝೈದನಿಗೆ ಮಫ್‌ಫಿರತ್ ದಯಪಾಲಿಸು, ಝೈದನಿಗೆ ಮಫ್‌ಫಿರತ್ ದಯಪಾಲಿಸು. (ಅತ್ತಬಖಾತುಲ್ ಕುಬ್ರ ಸಂಪುಟ-3, ಪುಟ-34, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹ ಹೇಳುತ್ತಾರೆ: ಹಝ್ರತ್ ಝೈದ್ ಬಿನ್ ಹಾರಿಸ, ಹಝ್ರತ್ ಜಅಫರ್ ಮತ್ತು ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಶಹೀದರಾದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮಸ್‌ಜಿದ್‌ನಲ್ಲಿ ಕುಳಿತುಕೊಂಡರು. ಅವರ ಮುಖ ಚಹರೆಯಿಂದ ದುಃಖವು ಪ್ರಕಟವಾಗುತ್ತಿತ್ತು. (ಸನನ್ ಅಬಿ ದಾಊದ್ ಕಿತಾಬುಲ್ ಜನಾಏಝ್ ಹದೀಸ್-3122)

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಮೂತ ಯುದ್ಧದ ಬಗ್ಗೆ ಪ್ರಸ್ತಾಪಿಸುತ್ತ ನುಡಿಯುತ್ತಾರೆ: ನಾನು ಮೊದಲು ಹಝ್ರತ್ ಝೈದ್ ಅವರ ಅವರ ಬಗ್ಗೆ ಪ್ರಸ್ತಾಪಿಸಿದ್ದೆ. ಆದರೆ ಸ್ವಲ್ಪ ಇನ್ನಷ್ಟು ವಿಷಯ ಪ್ರಸ್ತಾಪಿಸುವೆನು. ಹಝ್ರತ್ ಮುಸ್ಲಿಹ್ ಮೌಊದ(ರ) ಬರೆಯುತ್ತಾರೆ:

"ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರು ಹಝ್ರತ್ ಝೈದ್(ರ) ಅವರನ್ನು ಮೂತ ಯುದ್ಧದ ಸೈನಾಧಿಪತಿಯನ್ನಾಗಿ ನೇಮಿಸಿ ಹೀಗೆ ನುಡಿದಿದ್ದರು; ನಾನು ಈಗ ಝೈದರನ್ನು ಸೈನಾಧಿಪತಿಯನ್ನಾಗಿ ನೇಮಿಸುತ್ತಿದ್ದೇನೆ ಝೈದ್(ರ) ಯುದ್ಧದಲ್ಲಿ ಶಹೀದರಾದರೆ ಅವರ ನಂತರ ಹಝ್ರತ್ ಜಅಫರ್ ಬಿನ್ ಅಬೂ ತಾಲಿಬ್ ಅವರ ಸ್ಥಾನ ವಹಿಸುವರು. ಹಝ್ರತ್ ಜಅಫರ್ ಶಹೀದರಾದರೆ ಅಬ್ದುಲ್ಲಾ ಬಿನ್ ರವಾಹ ಸೇನಾಧಿಪತಿ ಆಗುವರು. ಹಝ್ರತ್ ಅಬ್ದುಲ್ಲಾ ಸಹ ಶಹೀದರಾದರೆ ಮುಸ್ಲಿಮರು ತಾವು ಇಚ್ಛಿಸುವವರನ್ನು ಸೇನಾಧಿಪತಿಯಾಗಿ ಮಾಡಿಕೊಳ್ಳಲಿ. ಹಝ್ರತ್ ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವಸಲ್ಲಮರು ಈ ಆದೇಶ ನೀಡುತ್ತಿರುವಾಗ ಓರ್ವ ಯಹೂದಿಯು ಸಹ ನಿಮ್ಮ ಬಳಿ ಕುಳಿತಿದ್ದನು. ಅವನು ಹೇಳಿದನು ನಾನು ನಿಮ್ಮನ್ನು ನಬಿ ಎಂದು ಭಾವಿಸುತ್ತಿಲ್ಲ ಆದರೆ ನೀವು ನಿಜವಾಗಿದರೆ ಈ ಮೂರು ಜನರಲ್ಲಿ ಯಾರೂ ಸಹ ಜೀವಂತವಾಗಿ ಹಿಂದಿರುಗುವುದಿಲ್ಲ. ಏಕೆಂದರೆ ನಬಿಯ ಬಾಯಿಯಿಂದ ಹೊರಡುವ ಮಾತು ಪೂರ್ಣಗೊಳ್ಳುತ್ತದೆ. ಆ ಯಹೂದಿ ಹಝ್ರತ್ ಝೈದ್(ರ) ಅವರ ಬಳಿಗೆ ಹೋಗಿ ಹೇಳಿದನು ನಿಮ್ಮ ಪ್ರವಾದಿ ನಿಜವಾಗಿದ್ದರೆ ನೀನು ಜೀವಂತವಾಗಿ ಹಿಂದಿರುಗುವುದಿಲ್ಲ. ಹಝ್ರತ್ ಝೈದ್(ರ) ಹೇಳಿದರು ನಾನು ಜೀವಂತವಾಗಿ ಹಿಂದಿರುಗುತ್ತೇನೊ ಅಥವಾ ಇಲ್ಲವೋ ಅದರ ಬಗ್ಗೆ ಅಲ್ಲಾಹನು ಬಲ್ಲವನಾಗಿದ್ದಾನೆ. ಆದರೆ ನಮ್ಮ ಪ್ರವಾದಿ(ಸ) ಅಲ್ಲಾಹನ ಕಡೆಯಿಂದ ನಿಜವಾಗಿದ್ದಾರೆ." ಹಝ್ರತ್ ಮುಸ್ಲಿಹ್ ಮೌಊದ್(ರ) ಬರೆಯುತ್ತಾರೆ: "ಇದು ಅಲ್ಲಾಹನ ಹಿಕ್‌ಮತ್ ಆಗಿದೆ ಈ ಘಟನೆಯು ನುಡಿದ ಹಾಗೆಯೇ ಆಯಿತು. ಮೊದಲು ಹಝ್ರತ್ ಝೈದ್(ರ) ಶಹೀದರಾದರು ಅವರ ನಂತರ ಹಝ್ರತ್ ಜಅಫರ್(ರ) ಅವರು ಸೈನ್ಯದ ನೇತೃತ್ವ ವಹಿಸಿದರು ಅವರ ನಂತರ ಹಝ್ರತ್ ಅಬ್ದುಲ್ಲಾ ಬಿನ್ ರವಾಹ(ರ) ಅವರು ಸೈನ್ಯದ ನೇತೃತ್ವ ವಹಿಸಿದರು ಆದರೆ ಅವರು ಸಹ ಶಹೀದರಾದರು. ಅನಂತರ ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರು ಕೆಲವು ಮುಸ್ಲಿಮರು ಹೇಳಿದ್ದರಿಂದ ಪತಾಕೆಯನ್ನು ತನ್ನ ಕೈಯಲ್ಲಿ ಹಿಡಿದುಕೊಂಡರು. ಅಲ್ಲಾಹನು ಅವರ ಮೂಲಕ ಮುಸ್ಲಿಮರಿಗೆ ವಿಜಯ ನೀಡಿದನು. ಅವರು ಸುರಕ್ಷಿತವಾಗಿ ಸೈನ್ಯವನ್ನು ಮರಳಿ ತಂದರು. (ಫರೀಜ ತಬ್‌ಲೀಗ್ ಔರ್ ಅಹ್ಮದಿ ಖವಾತೀನ್, ಅನ್ವಾರುಲ್ ಉಲುಮ್ ಸಂಪುಟ-18, ಪುಟ-405-406)

ನಾನು ವಿವರಿಸುತ್ತಿರುವ ಈ ಘಟನೆಯನ್ನು ಮೊದಲು ಸಹ ವಿವರಿಸಿದ್ದೇನೆ ಆದರೆ ಇದರಲ್ಲಿ ಹಝ್ರತ್ ಅಬ್ದುಲ್ಲಾ ಬಿನ್ ರವಾಹ(ರ) ಅವರ ನಿಷ್ಠೆ ಹಾಗೂ ಹುಝೂರ್ ಸಲ್ಲಲ್ಲಹು ಅಲೈಹಿವಸಲ್ಲಮರೊಂದಿಗೆ ಪ್ರೀತಿ ಮತ್ತು ಇಸ್ಲಾಮ್‌ನಿನ ಬಗ್ಗೆ ಪ್ರೀತಿ ವ್ಯಕ್ತವಾಗುತ್ತದೆ. ಆದ್ದರಿಂದ ಇಲ್ಲಿ ವ್ಯಕ್ತ ಪಡಿಸುವುದು ಅವಶ್ಯಕವಾಗಿದೆ.

ಹಝ್ರತ್ ಉರ್ವ ವರದಿ ಮಾಡುತ್ತಾರೆ. ಹಝ್ರತ್ ಉಸಾಮ ಬಿನ್ ಝೈದ್(ರ) ವರದಿ ಮಾಡುತ್ತಾರೆ: ಒಮ್ಮೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಒಂದು ಕತ್ತೆಯ ಮೇಲೆ ಕುಳಿತುಕೊಂಡು ತನ್ನ ಹಿಂದೆ ಉಸಾಮನನ್ನು ಕುಳ್ಳಿರಿಸಿ ಹಝ್ರತ್ ಸಅದ್ ಬಿನ್ ರೋಗಿಯಾಗಿದ್ದ ಉಬಾದರನ್ನು ಸಂದರ್ಶಿಸಲು ಬನು ಹಾರಿಸ್ ಬಿನ್ ಖಝ್‌ರಜ್‌ನ ಗೋತ್ರದ ಕಡೆ ಹೋದರು. ಈ ಘಟನೆಯು ಬದರ್‌ನ ಮುಂಚಿನದ್ದಾಗಿದೆ. ಅವರು ಜನರ ಒಂದು ಕೂಟದ ಸಮೀಪ ಹೋದರು. ಆ ಜನರಲ್ಲಿ ಅಬ್ದುಲ್ಲಾ ಬಿನ್ ಉಬಯ್ಯ್ ಇದ್ದನು. ಅಬ್ದುಲ್ಲಾ ಬಿನ್ ರವಾಹ ಸಹ ಅಲ್ಲಿ ಇದ್ದರು. ಆ ಜನರ ಸಮೀಪದಿಂದ ಹೋಗುವಾಗ ಧೂಳು ಹಾರಿತು ಮತ್ತು ಅಬ್ದುಲ್ಲಾ ಬಿನ್ ಉಬಯ್ಯ್ ತನ್ನ ಚಾದರದಿಂದ ಮೂಗನ್ನು ಮುಚ್ಚಿದನು ಮತ್ತು ಹೇಳಿದನು, ನಮ್ಮ ಮೇಲೆ ಧೂಳು ಹಾರಿಸಬೇಡ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅಸ್ಸಲಾಮು ಅಲೈಕುಮ್ ಹೇಳಿ ಸವಾರಿ ಮೃಗದಿಂದ ಇಳಿದರು. ಜನರನ್ನು ಅಲ್ಲಾಹನ ಕಡೆಗೆ ಕರೆದರು. ಪವಿತ್ರ ಖುರ್‌ಆನ್ ಪಠಿಸಿದರು. ಆಗ ಅಬ್ದುಲ್ಲಾ ಬಿನ್ ಉಬಯ್ಯ್ ಹೇಳಿದನು: ಓ ಮನುಷ್ಯ ನೀನು ಮಾಡಿದುದು ಸರಿಯಲ್ಲ. ನೀನು ಹೇಳುವುದು ಸತ್ಯವಾದರೂ ನಮ್ಮ ಬಳಿಗೆ ಬಂದು ತೊಂದರೆ ಮಾಡಬೇಡ. ನೀನು ನಿನ್ನ ಡೇರೆಗೆ ಹೋಗು. ನಿನ್ನ ಬಳಿಗೆ ಬರುವವರಿಗೆ ಉಪದೇಶ ನೀಡು. ಆಗ ಹಝ್ರತ್ ಅಬ್ದುಲ್ಲಾ ಬಿನ್ ರವಾಹ ತಕ್ಷಣ ಹೇಳಿದರು: ಯಾ ರಸೂಲುಲ್ಲಾಹ್, ನೀವು ನಮ್ಮ ಸಭೆಗಳಿಗೆ ಬನ್ನಿರಿ. ನಾವು ಅದನ್ನು ಇಷ್ಟಪಡುತ್ತೇವೆ. ಆ ಸಂದರ್ಭದಲ್ಲಿ ಅವರು ಯಾರಿಂದಲೂ ಭಯಭೀತರಾಗಲಿಲ್ಲ ಯಾರಿಗೂ ಅವರು ಲೆಕ್ಕಿಸಲಿಲ್ಲ. ತದನಂತರ ಅಲ್ಲಿ ಜಗಳವೂ ಆಯಿತು ಆದರೂ ಅವರು ಓರ್ವ ಗೌರವಾನ್ವಿತ ವ್ಯಕ್ತಿ ಆಗಿದ್ದರು. (ಸಹೀಹ್ ಮುಸ್ಲಿಮ್ ಕಿತಬುಲ್ ಜಿಹಾದ್, ಹದೀಸ್-1798)

ಹಝ್ರತ್ ಇಬ್ನೆ ಅಬ್ಬಾಸ್(ರ) ಅವರಿಂದ ವರದಿ ಆಗಿದೆ ಹುಝೂರ್ ಸಲಲ್ಲಾಹು ಅಲೈಹಿವಸಲ್ಲಮರು ಒಂದು ಯೋಜನೆಗಾಗಿ ಸಹಾಬರವರ ಒಂದು ತಂಡವನ್ನು ಕಳುಹಿಸಿದ್ದರು. ಅದರಲ್ಲಿ ಹಝ್ರತ್ ಅಬ್ದುಲ್ಲಾ ಬಿನ್ ರವಾಹ(ರ) ಸಹ ಇದ್ದರು. ಶುಕ್ರವಾರದ ದಿವಸವಾಗಿತ್ತು. ಯೋಜನೆಯಲ್ಲಿ ಭಾಗವಹಿಸಿರುವಂತಹ ಎಲ್ಲಾ ಸಹಾಬರು ಹೊರಟರು ಆದರೆ ಹಝ್ರತ್ ಅಬ್ದುಲ್ಲಾ ಬಿನ್ ರವಾಹ(ರ) ಹುಝೂರ್ ಸಲಲ್ಲಾಹು ಅಲೈಹಿವಸಲ್ಲಮರೊಂದಿಗೆ ಜುಮ್‌ಅದ ನಮಾಝ್ ನಿರ್ವಹಿಸಿ ಅರಬರೊಂದಿಗೆ ಬಂದು ಸೇರುವರು ಎಂದು ಹೇಳಿದರು. ಅನಂತರ ಅವರು ಪ್ರವಾದಿ(ಸ) ಅವರೊಂದಿಗೆ ನಮಾಝ್ ನಿರ್ವಹಿಸುತ್ತಿರುವುದನ್ನು ನೋಡಿದಾಗ ಅವರಲ್ಲಿ ಕೇಳಿದರು ನಿನಗೆ ಯಾವ ವಿಷಯ ಸಹಾಬರವರೊಂದಿಗೆ ಹೋಗಲು ತಡೆದಿದೆ? ಅದಕ್ಕೆ ಅವರು ಹೇಳಿದರು ನಾನು ನಿಮ್ಮೊಂದಿಗೆ ಜುಮ್‌ಅ ನಮಾಝ್ ನಿರ್ವಹಿಸಬೇಕೆಂಬ ಆಸೆಯಿಂದ ನಾನು ಇಲ್ಲಿಯೇ ಉಳಿದಿರುವೆ. ಅವರೊಂದಿಗೆ ನಾನು ಈಗ ಹೋಗಿ ಸೇರುವೆನು ಎಂದರು. ಹುಝೂರ್(ಸ) ಹೇಳಿದರು ಭೂಮಿಯಲ್ಲಿರುವಂತಹ ಪ್ರತಿಯೊಂದು ವಸ್ತುಗಳನ್ನು ಖರ್ಚು ಮಾಡಿದರು ಸಹ ಇದರಲ್ಲಿ ಪಾಲ್ಗೊಂಡ ಜನರಷ್ಟು ಅನುಗ್ರಹವನ್ನು ಪಡೆಯಲು ಸಾಧ್ಯವಿಲ್ಲ. (ಸನನ್ ಅತ್ತಿರ್‌ಮಿಝಿ ಹದೀಸ್-527)

ಆದ್ದರಿಂದ ಹೇಳಿದರು ನಾನು ಕಳುಹಿಸಿರುವಂತಹ ಯೋಜನೆಯ ಮಹತ್ವವು ಜುಮಾಅಕ್ಕಿಂತ ಹೆಚ್ಚಾಗಿದೆ. ರಸ್ತೆಯಲ್ಲಿ ನೀವು ನಮಾಝ್ ನಿರ್ವಹಿಸಬಹುದಾಗಿತ್ತು.

ಹಝ್ರತ್ ಅಬೂ ದರ್ದಾ ಹೇಳುತ್ತಾರೆ: ಒಮ್ಮೆ ನಾವು ಕಠಿಣ ಬೇಸಿಗೆ ಕಾಲದ ರಂಝಾನ್ ತಿಂಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಪ್ರಯಾಣ ಹೊರಟಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಹಝ್ರತ್ ಅಬ್ದುಲ್ಲಾ ಬಿನ್ ರವಾಹರ ಹೊರತು ಬೇರೆ ಯಾರೂ ಉಪವಾಸ ಮಾಡಿರಲಿಲ್ಲ. (ಸಹೀಹ್ ಮುಸ್ಲಿಮ್ ಕಿತಾಬುಸ್ಸಿಯಾಮ್ ಹದೀಸ್-1122)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: "ಮದೀನದಲ್ಲಿ ನಿವಾಸಿ ಅದ ಕಾಲದಲ್ಲಿ ಎಲ್ಲದಕ್ಕೂ ಮೊದಲ ಕೆಲಸ ಮಸ್‌ಜಿದ್ ನಬಿಯ ನಿರ್ಮಾಣವಾಗಿತ್ತು. ಹುಝೂರ್(ಸ) ಅವರ ಒಂಟೆ ಬಂದು ಕುಳಿತ ಸ್ಥಳವು ಇಬ್ಬರು ಮಕ್ಕಳಾದ ಸಹಲ್ ಮತ್ತು ಸುಹೇಲ್ ಅವರದ್ದಾಗಿತ್ತು ಅದು ಹಝ್ರತ್ ಅಸ್‌ಅದ್ ಬಿನ್ ಝುರಹ್(ರ) ಅವರ ಮೇಲ್ವಿಚಾರಕರಾಗಿದ್ದರು. ಹಝ್ರತ್ ರಸೂಲುಲ್ಲಾಹ್ ಸಲಲ್ಲಾಹು ಅಲೈಹಿವ ಸಲ್ಲಮರು ಮಸ್‌ಜಿದ್

ಹಾಗೂ ಕೊರಡಿಯ ನಿರ್ಮಾಣಕ್ಕೆ ಇಷ್ಟಪಟ್ಟಿದ್ದರು ಮತ್ತು ಹತ್ತು ದೀನಾರ್‌ನಲ್ಲಿ ಈ ಸ್ಥಳವನ್ನು ಖರೀದಿಸಿದರು. ಅನಂತರ ಮಸ್‌ಜಿದ್ ನಬವಿಯ ನಿರ್ಮಾಣವು ಪ್ರಾರಂಭವಾಯಿತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಪ್ರಾರ್ಥಿಸುತ್ತಾ ಸ್ವತಃ ಅಸ್ತಿಭಾರದ ಕಲ್ಲು ಇರಿಸಿದರು. ಸಹಾಬರು ಕಟ್ಟಡ ರಚಿಸುವ ಮತ್ತು ಕಾರ್ಮಿಕ ಸೇವೆ ಸಲ್ಲಿಸಿದರು. ಕೆಲವು ಸಾರಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ವತಃ ಅದರಲ್ಲಿ ಭಾಗವಹಿಸುತ್ತಿದ್ದರು. ಕೆಲವು ಸಾರಿ ಸಹಾಬರು ಕೆಲಸ ಮಾಡುವಾಗ ಹಝ್ರತ್ ಅಬ್ದುಲ್ಲಾ ಬಿನ್ ರವಾಹರ ಈ ಪದ್ಯ ಹಾಡುತ್ತಿದ್ದರು.

**ಹಾಝುಲ್‌ಜಮಾಲು ಲಹಿಮಾಲು ಖೈಬರ ಹಾಝು ಅಬರ್ರು ರಬ್ಬನಾ ಅತ್‌ಹರ್**

ಅಂದರೆ: ಈ ಭಾರವೂ ಪ್ರಾಣಿಗಳ ಮೇಲೆ ಇರಿಸುವಂತಹ ಖೈಬರ್‌ನ ವ್ಯಾಪಾರದ ಭರವಲ್ಲ ಬದಲಿಗೆ ಓ ಅಲ್ಲಾಹನೇ! ಈ ಭಾರವು ತಖ್ವ (ಭಯಭಕ್ತಿ) ಮತ್ತು ತಹಾರತ್‌ನ (ಪರಿಶುದ್ಧತೆ) ಭಾರವಾಗಿದೆ ಇದನ್ನು ನಾವು ನಿನಗಾಗಿ ಎತ್ತಿ ಹಿಡಿದಿದ್ದೇವೆ. ಕೆಲವೊಮ್ಮೆ ಸಹಾಬರವರು ಕೆಲಸ ಮಾಡುತ್ತಿರುವಾಗ ಅಬ್ದುಲ್ಲಾ ಬಿನ್ ರವಾಹರವರ ಈ ಪದ್ಯವನ್ನು ಸಹ ಹಾಡುತ್ತಿದ್ದರು.

**ಅಲ್ಲಾಹುಮ್ಮ ಇನ್ನಲ್ ಅಜ್‌ರ ಅಜ್‌ರಲ್ ಆಖಿರತಿ ಫರ್‌ಹಮಿಲ್ ಅನ್‌ಸಾರ ವಲ್ ಮುಹಾಜಿರ್.**

ಅಂದರೆ ಓ ಅಲ್ಲಾಹ್, ವಾಸ್ತವಿಕ ಪ್ರತಿಫಲ ಪರಲೋಕದ ಪ್ರತಫಲವೇ ಆಗಿದೆ. ಅನ್‌ಸಾರ್‌ಗಳ ಮತ್ತು ಮುಹಾಜಿರ್‌ಗಳ ಮೇಲೆ ನಿನ್ನ ಕಾರುಣ್ಯ ಸುರಿಸು. ಸಹಾಬರು ಹಾಡುವಾಗ ಕೆಲವು ಸಾರಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹ ಧ್ವನಿಗೂಡಿಸುತ್ತಿದ್ದರು. ಈ ರೀತಿ ದೀರ್ಘಕಾಲ ದುಡಿಮೆ ಮಾಡಿದ ನಂತರ ಆ ಮಸ್‌ಜಿದಿನ ನಿರ್ಮಾಣ ಪೂರ್ಣಗೊಂಡಿತು. (ಸೀರತ್ ಖಾತಮನ್ನಬೀಯೀನ್, ಪುಟ–269–270)

ಇದು ಹಝ್ರತ್ ಅಬ್ದುಲ್ಲಾ ಬಿನ್ ರವಾಹ(ರ) ಅವರ ಬಗ್ಗೆ ಪ್ರಸ್ತಾವನೆ ಆಯಿತು. ಇಂದು ಓರ್ವ ದಿವಂಗತರ ಬಗ್ಗೆ ಪ್ರಸ್ತಪಿಸಬೇಕಾದ್ದರಿಂದ ಇಂದು ಓರ್ವ ಸಹಾಬಿಯ ಬಗ್ಗೆ ಪ್ರಸ್ತಾಪಿಸಿದ್ದೇನೆ.

ಈಗ ನಾನು ಒಬ್ಬ ದಿವಂಗತರ ಬಗ್ಗೆ ಪ್ರಸ್ತಾಪಿಸುವೆನು. ಮನ್‌ಝೂರ್ ಅಹ್ಮದ್ ಖುರೈಶ್ ಸಾಹಿಬರ ಪುತ್ರ ಡಾಕ್ಟರ್ ಲತೀಫ್ ಅಹ್ಮದ್ ಖುರೈಶಿ ಸಾಹಿಬ್ ಅವರು ಜನವರಿ 19, 2020ರಂದು ಮಧ್ಯಾಹ್ನ ಒಂದು ಗಂಟೆಯ ಸಮಯ ತಮ್ಮ ಮನೆಯಲ್ಲಿ 80ನೇ ವಯಸ್ಸಿನಲ್ಲಿ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರು ಅಲ್ಲಾಹನ ಅನುಗ್ರಹದಿಂದ ಮೂಸಿ ಆಗಿದ್ದರು. ಅವರು ಅಜ್ಮೀರ್ ಶರೀಫಿನಲ್ಲಿ ಜನಿಸಿದರು. 1937ರಲ್ಲಿ ಅವರ ತಂದೆ ಮನ್‌ಝೂರ್ ಖುರೈಶಿ ಸಾಹೆಬರು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಕೈಯಲ್ಲಿ ಬೈಅತ್ ಮಾಡಿದ್ದರು. ಅವರ ತಾಯಿ ಮುಕರ್ರಮ ಮನ್‌ಸೂರ ಬುಶ್‌ರ ಸಾಹಿಬ ಅವರು ಹಝ್ರತ್ ಮಸೀಹ್ ಮೌಊದ್(ಅ) ಅವರ ಸಹಾಬಿ ಹಝ್ರತ್ ಮುನ್‌ಶಿ ಫಯಾಝ್ ಅಲಿ ಸಾಹೆಬ್ ಕಪೂರ್‌ಥಾಲ್ವಿ ಸಾಹೆಬ್ ಅವರ ತಾಯಿಯ ಕಡೆಯಿಂದ ಮೊಮ್ಮಗಳಾಗಿದ್ದಾರೆ ಮತ್ತು ಹಝ್ರತ್ ಅಬ್ದುರ್ರಶೀದ್ ಮೀರಠಿ(ರ) ಅವರ ತಂದೆಯ ಕಡೆಯಿಂದ ಮೊಮ್ಮಗಳಾಗಿದ್ದಾರೆ. ಈಗ ಸಹ ಜೀವಿಸಿದ್ದಾರೆ. ಮಾನ್ಯ ಡಾ॥ ಖುರೈಶಿ ಸಾಹೆಬರ ಪೋಷಕರು ಪಾಕಿಸ್ತಾನ ವಿಭಜನೆಗೊಂಡಾಗ ಲಾಹೋರಿಗೆ ವಲಸೇ ಹೋಗಿದ್ದರು ಅಲ್ಲಿ ಮೆಟ್ರಿಕ್ ಉತ್ತೀರ್ಣರಾದರು ಅನಂತರ ಕಿಂಗ್ ಎಡವರಡ್ ಮೆಡಿಕಲ್ ಕಾಲೇಜಿನಲ್ಲಿ ಪ್ರವೇಶಾತಿ ಪಡೆದರು. ಆ ಕಾಲದಲ್ಲಿ ಚಿಕ್ಕ ಪ್ರಾಯದಲ್ಲಿ ಎಮ್.ಬಿ.ಬಿ.ಎಸ್ ಪದವಿಗಳಿಸಿದ್ದರು. 1961ರಲ್ಲಿ ಉನ್ನತ ಪದವಿಗಾಗಿ ಇಂಗ್ಲೆಂಡಿಗೆ ತೆರಳಿದರು ಇಲ್ಲಿ ಮಕ್ಕಳ ತಜ್ಞರ ವಿಷಯದಲ್ಲಿ ಡಿಪ್ಲೊಮ ಮಾಡಿದರು. ಅನಂತರ ಎಂ.ಆರ್.ಸಿ.ಪಿ ಯ ಪದವಿ ಪಡೆದರು. ಅನಂತರ ಯು ಲೆವೆಲ್ ಸೋಮರ್‌ಸೆಟ್‌ನಲ್ಲಿ ಕನ್ಸಲ್ಟೆಂಟ್‌ನ ಕೆಲಸ ಪಡೆದರು. ಅಲ್ಲಿ ವಿಶೇಷವಾಗಿ ಹೃದಯ ಸಂಬಂಧಿತ ಕಾಯಿಲೆಗಳ ಬಗ್ಗೆ ಪರಿಣಿತಿ ಹೊಂದಿದರು. 1968ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ರಹಿಮಹುಲ್ಲಾಹು ತಆಲಾ ಡಾಕ್ಟರ್ ಸಾಹಿಬರೊಂದಿಗೆ ಕೇಳಿದರು: ತಾವು ನಮ್ಮ ಬಳಿಗೆ ಯಾವಾಗ ಬರುವಿರಿ? ಡಾಕ್ಟರ್ ಸಾಹಿಬ್ ಹೇಳಿದರು: ತಾವು ಆಜ್ಞೆ ನೀಡಿದಾಗ ಬರುವೆನು ಎಂದು. ಆಗ ಹಝ್ರತ್ ಖಲೀಫತುಲ್ ಮಸೀಹ್ ರಹಿಮಹುಲ್ಲಾಹು ತಆಲಾ ಹೇಳಿದರು: ನೀವು ಬನ್ನಿರಿ. ಹಾಗೆ ಡಾಕ್ಟರ್ ಸಾಹಿಬರು ಇಂಗ್ಲೆಂಡನ್ನು ಬಿಟ್ಟು ರಬ್ವಕ್ಕೆ ಆಗಮಿಸಿದರು. ರಬ್ವದ ಫಝ್ಲ್ ಉಮರ್ ಹಾಸ್ಪಿಟಲ್‌ನಲ್ಲಿ ಅವರನ್ನು ನೇಮಿಸಲಾಯಿತು. ಅವರು ದೀರ್ಘಕಾಲ ಅಲ್ಲಿಯೇ ಕೆಲಸ ಮಾಡುತ್ತಾ ಇದ್ದರು. 1983 ಜುಲಾಯಿ ದಿನಾಂಕ 11ರಂದು ರಬ್ವದ ಫಝ್ಲ್ ಉಮರ್ ಹಾಸ್ಪಿಟಲ್‌ನಲ್ಲಿ ಚೀಫ್ ಮೆಡಿಕಲ್ ಆಫೀಸರ್ ಆಗಿ ನೇಮಿಸಲ್ಪಟ್ಟರು. ಈ ರೀತಿ ಅವರು ಫಝ್ಲ್ ಉಮರ್ ಹಾಸ್ಪಿಟಲ್‌ನಲ್ಲಿ ಅಂದಾಜು ಮೂವತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಡಾ॥ ಲತೀಫ್ ಖುರೈಶಿ ಸಾಹೆಬರಲ್ಲದೆ ಖುದ್ದಾಮುಲ್ ಅಹ್ಮದಿಯ ಹಾಗೂ ಅನ್ಸಾರುಲ್ಲಾ ಮರ್ಕಝಿಯಾದಲ್ಲಿ ಅನೇಕ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದರು.

ಈ ಕಾಲದಲ್ಲಿ ಅವರು ಎರಡು ವರ್ಷ ಮಜ್‌ಲಿಸ್ ಇಫ್ತಾದ ಸದಸ್ಯರಾಗಿದ್ದರು. ಅವರು ಎರಡು ಪುಸ್ತಕಗಳನ್ನು ವಿಶೇಷವಾಗಿ ಪಾಕಿಸ್ತಾನದ ನಿವಾಸಿಗಳಿಗಾಗಿ ಬರೆದಿದ್ದಾರೆ. ಅವರ ಪತ್ನಿ ಸಹ ಕೆಲವು ದಿನಗಳ ಹಿಂದೆ ನಿಧನ ಹೊಂದಿದ್ದರು. ಅವರ ಬಗ್ಗೆ ನಾನು ಪ್ರಸ್ತಾಪಿಸಿದ್ದೆ. ಅನಂತರ ಹದಿನೈದು ದಿನಗಳ ಬಳಿಕ ಡಾಕ್ಟರ್ ಸಾಹಿಬರು ನಿಧನ ಹೊಂದಿದರು. ಅವರಿಗೆ ಮೂವರು ಪುತ್ರರು ಹಾಗೂ ಇಬ್ಬರು ಪುತ್ರಿಯರಿದ್ದಾರೆ. ಅವರ ಪುತ್ರ ಡಾಕ್ಟರ್ ಅತಾಉಲ್ ಮಾಲಿಕ್ ಸಾಹಿಬ್ ಹೇಳುತ್ತಾರೆ: ನಾನು ತಿಳುವಳಿಕೆ ಗಳಿಸಿದ ನಂತರ ನನ್ನ ಪಿತ ತಹಜ್ಜುದ್ ನಮಾಝ್ ತ್ಯಜಿಸಿದುದನ್ನು ನಾನು ಕಾಣಲಿಲ್ಲ. ನಮ್ಮ ತಾಯಿ ಹೇಳುತ್ತಿದ್ದರು, ವಿವಾಹದ ಮೊದಲನೆಯ ದಿನದಿಂದ ತಹಜ್ಜುದ್ ನಮಾಝ್ ನಿರಂತರವಾಗಿ ಡಾಕ್ಟರ್ ಸಾಹಿಬ್ ನಿರ್ವಹಿಸುತ್ತಿದ್ದರು. ಎಂದರೆ ಅಂದಾಜು ಐವತ್ತು ವರ್ಷಗಳ ಕಾಲ ನಿರಂತರವಾಗಿ ಡಾಕ್ಟರ್ ಸಾಹಿಬ್ ತಹಜ್ಜುದ್ ನಮಾಝ್ ಅನುಷ್ಠಿಸುತ್ತಿದ್ದರು. ನನ್ನ ತಾಯಿಯು ಕೊನೆಗಾಲದಲ್ಲಿ ಅವರು ರೋಗ ಪೀಡಿತರಾಗಿದ್ದಾಗ ನಮ್ಮ ತಂದೆಯರು ಬಹಳ ಶ್ರಮವಹಿಸಿ ಅವರನ್ನು ನೋಡಿಕೊಳ್ಳುತ್ತಿದ್ದರು. ಡಯಾಲೀಸಿಸ್ ಮಾಡಿಸಲು ಸಹ ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿಯು ಸಹ ಗಂಟೆಗಟ್ಟಲೆ ಕೂರಬೇಕಾಗುತ್ತಿತ್ತು ಆದರೆ ಎಂದೂ ಸಹ ತಹಜ್ಜುದ್ ಬಿಡುತ್ತಿರಲಿಲ್ಲ. ರೋಗಿಗಳೊಂದಿಗೆ ಬಹಳ ವಿನಮ್ರತೆಯಿಂದ ವರ್ತಿಸುತ್ತಿದ್ದರು. ಬಡವರಿಗೆ ಸಹಾಯ ಮಾಡುತ್ತಿದ್ದರು. ಕೆಲವೊಮ್ಮೆ ತಮ್ಮ ಕಡೆಯಿಂದ ಅವರಿಗೆ ಸಹಾಯ ಮಾಡುತ್ತಿದ್ದರು. ಪ್ರತಿಕ್ಷಣ ಹೇಳುತ್ತಿದ್ದರು ರೋಗಪರಿಹಾರವು ಅಲ್ಲಾಹ ಕೈಯಲ್ಲಿದೆ. ತಮ್ಮ ಮಕ್ಕಳಿಗೂ ಸಹ ವಿಶೇಷವಾಗಿ ವೈದ್ಯ ಮಕ್ಕಳಿಗೆ ಸಲಹೆ ನೀಡುತ್ತಿದ್ದರು ಯಾವಾಗಲೂ ಅಲ್ಲಹನಲ್ಲಿ ತನ್ನ ರೋಗಿಗಳಿಗೋಸ್ಕರ ದುಆ ಮಾಡುತ್ತಾ ಇರಿ.

1969ರಲ್ಲಿ ಇಂಗ್ಲೆಂಡಿನಲ್ಲಿ ಸಲಹೆಗಾರರಾಗಿ ಕೆಲಸ ಮಾಡುತ್ತಿರುವಾಗ ಲೌಕಿಕ ಲಾಲಾಸೆಗಳನ್ನು ತ್ಯಜಿಸಿ ಅಲ್ಲಾಹನ ಮೇಲೆ ಭರವಸೆ ಮಾಡಿ ರಬ್ವಾಗೆ ಹಿಂದಿರುಗಿದ್ದರು. ಹೀಗೆ ಅಲ್ಲಾಹನು ಅವರ ಮೇಲೆ ಕರುಣೆ ತೋರಿದನು ಅವರ ಮಕ್ಕಳು ಸಹ ಉನ್ನತ ಪದವಿಗಳನ್ನು ಪಡೆದರು. ಅವರ ಮೂರು ಗಂಡು ಮಕ್ಕಳು ಅಮೇರಿಕದಲ್ಲಿ ವೈದ್ಯರಾಗಿದ್ದಾರೆ. ಅವರೆಲ್ಲರು ಪೋಷಕರ ಬಹಳ ಸೇವೆ ಮಾಡುತ್ತಾರೆ. ಅವರ ಇನ್ನೊರ್ವ ಪುತ್ರ ಹೇಳುತ್ತಾರೆ: ನನ್ನ ತಾಯಿ ನಾನು ಅಮೇರಿಕಕ್ಕೆ ತೆರಳಬೇಕಾದರೆ ನನ್ನ ಪರೀಕ್ಷೆಗಳಿಗೆ ಬಹಳ ಸಹಾಯ ಮಾಡುತ್ತಿದ್ದರು. ನಮ್ಮೆಲ್ಲರಲ್ಲಿ ಉತ್ಸಾಹ ತುಂಬುತ್ತಿದ್ದರು. ತೋರಿಕೆ ಮಾಡುವುದನ್ನು ಇಷ್ಟಪಡುತ್ತಿರಲಿಲ್ಲ. ಯಾವಾಗಲು ಸಾಮಾನ್ಯ ಜೀವನ ಸಾಗಿಸಲು ಸಲಹೆ ನೀಡುತ್ತಿದ್ದರು ಅದೇ ರೀತಿ ಖಲೀಫರಿಗೆ ದುಆಕ್ಕಾಗಿ ಪತ್ರ ಬರೆಯಲು ಆಜ್ಞಾಪಿಸುತ್ತಿದ್ದರು.

ಡಾಕ್ಟರ್ ಸಾಹಿಬರ ದ್ವಿತೀಯ ಪುತ್ರ ಡಾಕ್ಟರ್ ಖುರೈಶಿ ಮುಹಮ್ಮದ್ ಅಹ್ಮದ್ ಮಹ್‌ಮೂದ್ ಹೇಳುತ್ತಾರೆ: ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ಹೇಳುತ್ತಿದ್ದರು, ಅವರು ಡಾಕ್ಟರ್ ಮಾತ್ರವಲ್ಲ ಪ್ರಾರ್ಥಿಸುವ ಡಾಕ್ಟರ್ ಕೂಡಾ ಆಗಿದ್ದಾರೆ. ಅವರು ರೋಗಿಗಳ ಪರವಾಗಿ ಪ್ರಾರ್ಥಿಸುವವರಾಗಿದ್ದಾರೆ. ಅವರು ಔಷಧಿ ಚೀಟಿ ಬರೆಯುವಾಗ ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್ ಎಂದು ಬರೆದು ಅದರ ಕೆಳಗೆ ಹೂವಶ್ಶಾಫೀ (ಅಲ್ಲಾಹನೇ ರೋಗ ನಿವಾರಕ) ಎಂದು ಬರೆಯುತ್ತಿದ್ದರು. ಅದೇ ರೀತಿ ಬೇರೆ ಡಾಕ್ಟರ್‌ಗಳೊಂದಿಗೆ ಪ್ರತಿಕ್ಷಣ ತಮ್ಮ ರೋಗಿಗಳಿಗೋಸ್ಕರ ದುಆ ಮಾಡುತ್ತಿರಲು ಸಲಹೆ ನೀಡುತ್ತಿದ್ದರು. ಏಕೆಂದರೆ ಅಲ್ಲಾಹನಲ್ಲಿಯೆ ರೋಗ ಪರಿಹಾರವಿರುವುದು ಎಂದು. ಕೊನೆಯಲ್ಲಿ ಅವರು ಹೇಳುತ್ತಾರೆ; ನನ್ನ ತಾಯಿಯ ನಿಧನದ ನಂತರ ಶೋರ್‌ಕೋಟ್‌ನಿಂದ ಒಬ್ಬ ರೋಗಿ ಆಗಮಿಸಿದನು. ಆಗ ಅವರು ಪ್ರಯಾಣ ಹೋಗುತ್ತಿದ್ದರು ಆದರೂ ಅವರು ತಮ್ಮ ವಾಹನದಿಂದ ಇಳಿದು ಬಂದು ಆ ರೋಗಿಯನ್ನು ಸಂದರ್ಶಿಸಿದರು. ಅವರು ಸಾಮಾನ್ಯವಾಗಿ ತಮ್ಮ ಕಡೆಯಿಂದ ರೋಗಿಗಳಿಗೆ ಔಷಧಿಗಳನ್ನು ಖರೀದಿಸಿ ನೀಡುತ್ತಿದ್ದರು. ಅವರ ಪುತ್ರಿ ಹೇಳುತ್ತಾರೆ: ಮಹಿಳೆಯೊರ್ವರು ನನ್ನ ಬಳಿ ಹೇಳಿದಳು ನನ್ನ ತಂದೆಗೆ ಹೃದಯಘಾತವಾಗಿದೆ. ಆಗ ಅವರು ಮನೆಯಲ್ಲಿ ಒಬ್ಬರೆ ಇದ್ದರು. ಅಂದರೆ ಆ ಮಹಿಳೆಯ ತಂದೆಯನ್ನು ಅವರು ಮನೆಗೆ ಹೋಗಿ ಅವರಿಗೆ ಸಂದರ್ಶಿಸಿದರು, ಮಕ್ಕಳಿಗೆ ಫೋನ್ ಮಾಡಿದರು ಅವರು ಬರುವ ತನಕ ಎದ್ದು ಹೋಗಲಿಲ್ಲ. ಅವರ ಹತ್ತಿರ ಕುಳಿತಿದ್ದರು. ಪ್ರತಿ ವರ್ಷ ಕಾದಿಯಾನಿನ ಜಲ್ಸಾಗಿ ಇಂಗ್ಲೆಂಡಿನಿಂದ ಖಾದಿಯಾನಿಗೆ ಹೋಗಲು ಬಹಳ ಶ್ರಮವಹಿಸುತ್ತಿದ್ದರು. ಅವರು ನಿಧನ ಹೊಂದುವುದಕ್ಕಿಂತ ಮುಂಚೆ ಬೆಳಿಗ್ಗೆ 9ಗಂಟೆಯಿಂದ ಮಧ್ಯಹ್ನ 1ಗಂಟೆಯವರೆಗೆ ತಮ್ಮ ಮನೆಯ ಹತ್ತಿರ ಇದ್ದ ಕ್ಲಿನಿಕ್ಕಿನಲ್ಲಿ ರೋಗಿಗಳನ್ನು ಸಂದರ್ಶಿಸುತ್ತಿದ್ದರು. 1ಗಂಟೆಗೆ ಮನೆಗೆ ಬಂದು ವಝು ಮಾಡಿದರು. ವಝುವಿನ ನಂತರ ಮಸ್‌ಜಿದ್ ಮುಬಾರಕ್‌ನಲ್ಲಿ ನಮಾಝ್ ನಿರ್ವಹಿಸಬೇಕೆಂದು ಬಯಸಿದ್ದರು. ಹಾಸಿಗೆ ಮೇಲೆ ಕುಳಿತಿದ್ದಾಗ ತಮ್ಮ ಪಾದರಕ್ಷೆಗಳನ್ನು ತೆಗೆಯುತ್ತಿರುವಾಗ ಆಕಸ್ಮಿಕವಾಗಿ ಹೃದಯಾಘಾತವಾಯಿತು ಹೀಗೆ ಅವರು ಅಲ್ಲಾಹನ ಆಸ್ತಾನ ಪ್ರವೇಶಿಸಿದರು.

ನೆರೆಹೊರೆಯವರೊಂದಿಗೆ ಉತ್ತಮ ಸಂಬಂಧ ಇರಿಸುತ್ತಿದ್ದರು ಮತ್ತು ನೆರೆಹೊರೆಯವರು ಸಹ ಅವರನ್ನು ಬಹಳ ಪ್ರೀತಿಯಿಂದ ಕಾಣುತ್ತಿದ್ದರು. ಪದ್ಯಗಳನ್ನು ಹಾಡುವುದಲ್ಲಿ ಬಹಳ ಆಸಕ್ತಿ ಹೊಂದಿದ್ದರು. ದುರ್ರೆ ಸಮೀನ್, ಕಲಾಮೆ ಮಹ್ಮೂದ್ ಹಾಗೂ ದುರ್ರೆ ಅದನ್‍ನ ಪದ್ಯಗಳನ್ನು ಬಹಳ ಸೊಗಸಾಗಿ ಹಾಡುತ್ತಿದ್ದರು. ಮುರಬ್ಬಿ ಸಯ್ಯದ್ ಹುಸೇನ್ ಅಹ್ಮದ್ ಅವರು ಹೇಳುತ್ತಾರೆ ಡಾ॥ ಸಾಹೆಬರು ಹೇಳುತ್ತಾರೆ ಲಂಡನ್ನಿನಿಂದ ಜಮಾಅತ್ತಿನ ಆಸ್ಪತ್ರೆಯಲ್ಲಿ ಸೇವೆಗಾಗಿ ಪಾಕಿಸ್ತಾನಕ್ಕೆ ಹೋಗಿದರು. ಲಹೋರಿನಿಂದ ರೈಲಿನಿಂದ ರಬ್ವಾಹ್‍ಕ್ಕೆ ತಲುಪಿದಾಗ ನೇರವಾಗಿ ಪ್ರೈವೇಟ್ ಸೆಕ್ರೇಟರಿಯ ಆಫಿಸ್‍ಗೆ ತೆರಳಿದರು. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್[ರ] ಅವರು ಕೇಳಿದರು ಬಂದಿರುವೆಯೇ? ಅದಕ್ಕೆ ಅವರು ಹೇಳಿದರು ಹೌದು ಹುಝೂರ್ ನಿಮ್ಮ ಸೇವೆಯಲ್ಲಿ ಹಾಜರಾಗಿದ್ದೇನೆ. ಅದಕ್ಕೆ ಹುಝೂರ್ ಹೇಳಿದರು ನಿಮ್ಮ ಮನೆಯನ್ನು ನಾನು ಸುಣ್ಣ ಬಳಿದು ಮುಚ್ಚಿಟ್ಟಿದ್ದೇನೆ ನೀವು ನಾಝಿರ್ ಆಲ ಬಳಿ ಹೋಗಿ ಅದರ ಬೀಗೆ ತೆಗೆದುಕೊಂಡು ಅಲ್ಲಿರಿ ಎಂದರು. ಅವರು ಹೇಳುತ್ತಾರೆ ನಾನು ಮನೆ ಬಾಗಿಲು ತೆರೆದಾಗ ಅಲ್ಲಿ ಎರಡು ಮಂಚಗಳಿದ್ದವು ಅನಂತರ ಇನ್ನಷ್ಟು ಮಂಚಗಳನ್ನು ಅವರು ಸ್ವತಃ ಖರೀದಿಸಿದರು. ಮನೆ ಸಾಮಗ್ರಿಗಳನ್ನು ಖರೀದಿಸಿ ಅಲ್ಲಿ ವಾಸಿಸಲು ಪ್ರಾರಂಭಿಸಿದರು. ಮೊದಲನೆಯ ವರ್ಷ ಅವರ ಮನೆಗೆ ಅವರ ಸಂಬಂಧಿಕರು ಬಂದಾಗ ಅವರು ಸ್ವತಃ ಹುಲ್ಲಿನ ಮೇಲೆ ಮಲಗುತ್ತಿದ್ದರು. ಅವರ ಬಳಿ ಇದ್ದ ಮನೆಯನ್ನು ಅವರ ಅತಿಥಿಗಳಿಗೆ ನೀಡಿದರು. ಅವರ ಮಾವ ಮೌಲಾನ ಅಬ್ದುಲ್ ಮಲಿಕ್ ಖಾನ್ ಸಾಹೆಬ್ ಅವರ ಸೇವೆ ಮಾಡಿದ್ದಾರೆ. ಹುಸೈನ್ ಸಾಹೆಬ್ ಹೇಳುತ್ತಾರೆ: ಡಾಕ್ಟರ್ ಸಾಹೆಬ್ ಹೇಳುತ್ತಿದ್ದರು ನನ್ನ ಸಹಪಾಠಿ ವೈದ್ಯರು ಬಹಳಷ್ಟು ಜನರಿದ್ದರು ಅವರು ಕೇಳುತ್ತಿದ್ದರು ನೀನು ರಬ್ವದಂತಹ ಚಿಕ್ಕ ಹಳ್ಳಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೀಯ ನಿಮ್ಮ ವೇತನ ಎಷ್ಟಾಗಿದೆ? ಅದಕ್ಕೆ ಅವರು ಉತ್ತರಿಸುತ್ತಿದ್ದರು ನಾನು ರಬ್ವಹ್‍ದಲ್ಲಿ ಕುಳಿತುಕೊಂಡು ಕೆಲಸ ಮಾಡುತ್ತಿರುವೆ. ವೇತನದ ಬಗ್ಗೆ ಜನರಿಗೆ ಭಾವಿಸಲು ಸಾಧ್ಯವಿಲ್ಲ ಹಾಗೂ ನೀವು ಇದನ್ನು ತಿಳಿಯಲು ಸಾಧ್ಯವಿಲ್ಲ. ನನಗೆ ಸಿಗುವಂತಹ ಪ್ರಾರ್ಥನೆಗಳಿಗಿಂತ ಹೆಚ್ಚು ವೇತನ ಯಾವುದೂ ಇಲ್ಲ. ಸಹಾಬ ಹಝ್ರತ್ ಮಸೀಹ್ ಮೌಊದ್[ಅ], ಹಝ್ರತ್ ನವಾಬ್ ಮುಬಾರಕ ಬೇಗಮ್ ಸಾಹೆಬ[ರ], ಹಝ್ರತ್ ಸಯ್ಯದಹ್ ಅಮತುಲ್ ಹಫೀಝ್ ಬೇಗಮ್ ಸಾಹೆಬ ರವರ ಸೇವೆ ಮಾಡಲು ಅವಕಾಶ ಲಭಿಸಿತು. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್[ರ] ಅವರು ನಿಧನ ಹೊಂದಿದಾಗ ಇಸ್ಲಾಮಾಬಾದ್‍ನಲ್ಲಿ ಅವರೊಂದಿಗಿದ್ದರು. ಅದೇ ರೀತಿ ಅನೇಕ ಗೌರವಾನ್ವಿತ ವ್ಯಕ್ತಿಗಳ ಸೇವೆ ಮಾಡುವ ಸೌಭಾಗ್ಯ ಪಡೆದರು.

ಡಾಕ್ಟರ್ ಅಬ್ದುಲ್ ಖಾಲಖ್ ಸಾಹೆಬ್ ಹೇಳುತ್ತಾರೆ: ಬಡವರ ವೈದ್ಯ ಈ ಪಟ್ಟಣದಿಂದ ಅಗಲಿ ಹೋದರು ಎಂದು ಹೇಳಿದರೆ ಅದು ತಪ್ಪಾಗಲಾರದು. ಅವರು ಸುಮಾರು 50ವರ್ಷಕ್ಕಿಂತ ಹೆಚ್ಚು ಕಾಲ ಯಾವುದೇ ಪಕ್ಷಪಾತವಿಲ್ಲದೆ ಬಡವರ ಸೇವೆ ಮಾಡಿದ್ದಾರೆ. ಅವರು ಆಸ್ಪತ್ರೆಯ ಚೀಫ್ ಮೆಡಿಕಲ್ ಆಫಿಸರ್ ಆಗಿದ್ದಾಗ ಆಸ್ಪತ್ರೆಯ ಸಾಮಗ್ರಿಗಳನ್ನು ಖರೀದಿಸಲು ತಾವು ಸ್ವತಃ ಲಾಹೋರಿಗೆ ಹೋಗುತ್ತಿದ್ದರು. ಮಾರುಕಟ್ಟೆಯಲ್ಲಿ ದರಗಳನ್ನು ವಿಚಾರಿಸಿದ ನಂತರ ಉತ್ತಮ ವಸ್ತುಗಳನ್ನು ಖರೀದಿಸುತ್ತಿದ್ದರು. ಸಾಮಾನ್ಯವಾಗಿ ಸಂಪೂರ್ಣ ಒಂದು ದಿವಸ ಈ ಕೆಲಸದಲ್ಲಿ ಕಳೆಯುತ್ತಿದ್ದರು. ಹೀಗೆ ಅವರು ಜಮಾಅತ್ತಿನ ಸಂಪತ್ತನ್ನು ನಿಷ್ಠೆಯಿಂದ ಖರ್ಚು ಮಾಡುತ್ತಿದ್ದರು. ಆಸ್ಪತ್ರೆಯಲ್ಲಿ ಅಲ್ಟ್ರಾ ಸೌಂಡ್ ಹಾಗೂ ಎಂಡೋಸ್ಕೋಪಿಯ ವಿಭಾಗಗಳನ್ನು ಇವರು ಉದ್ಘಾಟಿಸಿದ್ದರು. ಫಝ್ಲೆ ಉಮರ್ ಆಸ್ಪತ್ರೆಯ ಬಗ್ಗೆ ಖಲೀಫರ ಪ್ರಾರ್ಥನೆಗಳಿವೆ ಮತ್ತು ಅವರ ಆರೋಗ್ಯದ ವಿಷಯದಲ್ಲಿ ಅಲ್ಲಾಹನ ಅನುಗ್ರಹದಿಂದ ಬಹಳಷ್ಟು ಪವಾಡಗಳಾಗಿವೆ.

ಡಾ॥ ಸುಲ್ತಾನ್ ಮುಬಶ್ಶಿರ್ ಸಾಹೆಬ್ ಬರೆಯುತ್ತಾರೆ ಫಝ್ಲೆ ಉಮರ್ ಆಸ್ಪತ್ರೆಯ ಸೇವೆಯು ಸುಮಾರು 30 ವರ್ಷ ಒಳಗೊಂಡಿದೆ. ಈ ಕಾಲದಲ್ಲಿ ಅವರ ಮೇಲೆ ಬಹಳಷ್ಟು ತೊಂದರೆಗಳನ್ನು ಅನುಭವಿಸಿದರು. ಅಲ್ಲಾಹನ ಆ ದಾಸರು ಆ ತೊಂದರೆಗಳನ್ನು ಲೆಕ್ಕಿಸದೆ ವಿನಮ್ರತೆ ತೋರಿ ಅಲ್ಲಾಹನ ಆಸ್ತಾನದಲ್ಲಿ ಪ್ರಾರ್ಥಿಸುತ್ತಿದ್ದರು. ಸುಲ್ತಾನ್ ಮುಬಶ್ಶಿರ್ ಸಾಹೆಬರು ಇದು ಸರಿಯಾಗಿ ಬರೆದಿದ್ದಾರೆ. ಕೆಲವು ಮಾತುಗಳು ನನಗು ಸಹ ಗೊತ್ತಿದೆ. ಅವರು ಬಹಳ ಸಹನೆಯಿಂದ ತಮ್ಮ ತೊಂದರೆಗಳನ್ನು ಸಹಿಸುತ್ತಿದ್ದರು ಮತ್ತು ಅಲ್ಲಾಹನು ಅವರಿಗೆ ಬಹಳಷ್ಟು ಅನುಗ್ರಹಿಸಿದ್ದನು ಅವರು ಎಂದೂ ಯಾವ ಹುದ್ದೆದಾರರ ಬಗ್ಗೆಯು ದೂರು ನೀಡಲಿಲ್ಲ. ಡಾ॥ ಸುಲ್ತಾನ್ ಮುಬಶ್ಶಿರ್ ಸಾಹೆಬರು ಬರೆಯುತ್ತಾರೆ ನನಗೆ ನೆನಪಿದೆ ಅವರು ಯಾವ ಪಕ್ಷಪಾತವಿಲ್ಲದೆ ಚಿಕಿತ್ಸೆ ನೀಡುತ್ತಿದ್ದರು. ಡಾ॥ ಸುಲ್ತಾನ್ ಮುಬಶ್ಶಿರ್ ಸಾಹೆಬ್ ಒಂದು ಘಟನೆ ವಿವರಿಸುತ್ತಾರೆ ಒಮ್ಮೆ ಮಧ್ಯಾಹ್ನದ ಹೊತ್ತು ರಹ್ಮತ್ ಅಲಿ ಸಾಹೆಬ್ ಡ್ರೈವರ್‍ನ ಪತ್ನಿ ತುರ್ತುಚಿಕಿತ್ಸೆಗಾಗಿ ಬಂದಿದ್ದರು. ನಾನು ಆಸ್ಪತ್ರೆಗೆ ಬರಲು ಅವರಲ್ಲಿ ವಿನಂತಿಸಿಕೊಂಡಿದ್ದರು. ಅವರು ತಕ್ಷಣ ತಮ್ಮ ಮನೆ ದಾರುಲ್‍ಉಲೂಮ್ ಶರ್‍ಖಿಯಿಂದ ಕೆಲ ಕ್ಷಣದಲ್ಲಿ ಆಸ್ಪತ್ರೆಗೆ ಬಂದರು. ಅವರ ಮನೆ ಆಸ್ಪತ್ರೆಯ ಹತ್ತಿರ ಇರಲಿಲ್ಲ ದೂರದಲ್ಲಿತ್ತು ಆದರೂ ಅವರು ಅಲ್ಲಿಂದ ತಕ್ಷಣವೇ ಆಸ್ಪತ್ರೆಗೆ ಬಂದರು. ಜಮಾಅತ್ತಿನ ನಿಷ್ಠಾವಂತರಾಗಿದ್ದರು. ನಮಗೆಲ್ಲರಿಗೂ ಯಾವಾಗಲು ನಿಝಾಮ್‍ನೊಂದಿಗೆ ವಿಧೇಯತೆ ತೋರಬೇಕು.

ಅವರ ಪತ್ನಿ ಶೌಕತ್ ಸಾಹೆಬ ನಿಧನ ಹೊಂದಿದ ಮಾರನೇ ದಿವಸ ಅವರ ಇಬ್ಬರು ಸೋದರಳಿಯರ ವಲೀಮ ಇತ್ತು. ಅವರು ಆ ದಿವಸ ಮದುಮಗನ ಮನೆಗೆ ಹೋಗಿ ಅವರಲ್ಲಿ ವಿನಂತಿಸಿಕೊಂಡರು ನನ್ನ ಪತ್ನಿಯು ನಿಧನ ಹೊಂದಿದ್ದಾರೆ ಆದರೆ ನೀವು ಎಲ್ಲಾ ಕಾರ್ಯಕ್ರಮಗಳನ್ನು ಅವಶ್ಯವಾಗಿ ಮಾಡಿರಿ ಕಾರ್ಯಕ್ರಮಗಳನ್ನು ನಿಲ್ಲಿಸಬೇಡಿ. ಆಕೆಂದರೆ ಅವರು ಮದುಮಗನ ಚಿಕ್ಕಮ್ಮ ಆಗಿದ್ದರು. ಹುಸೇನ್ ಸಾಹೆಬ್ ಅವರ ಇಬ್ಬರು ಮಕ್ಕಳು ಮದುಮಗರಾಗಿದ್ದರು. ಅವರಿಬ್ಬರ ವಲಿಮ ಇತ್ತು ಅದರೆ ಇವರು ಅವರ ಬಳಿ ಹೋಗಿ ನೀವು ನಿಮ್ಮ ಕಾರ್ಯಕ್ರಮಗಳನ್ನು ತಡಗಟ್ಟಬೇಡಿ ಎಂದು ವಿನಂತಿಸಿಕೊಂಡರು. ಅನಂತರ ಅವರ ಪುತ್ರ ಡಾ॥ ಮಹ್‍ಮೂದ್ ಸಾಹೆಬ್ ಹೇಳಿದರು ನಾನು ಅವರ ಕಾರ್ಯಕ್ರಮದಲ್ಲಿ ಭಾಗವಹಿಸುವುದಿಲ್ಲ ಮನೆಯಲ್ಲಿರುವೆನು ಎಂದಾಗ ಅವರು ಹೇಳಿದರು ಈ ಸಂದರ್ಭದಲ್ಲಿ ಅಲ್ಲಾಹನ ಇಚ್ಛೆ ಅನುಸಾರ ನಾವು ರಾಜಿ ಆಗಬೇಕು. ಅನಂತರ ಅವರಿಬ್ಬರು ಬಹಳ ಸಹನೆಯಿಂದ ವಲೀಮದಲ್ಲಿ ಭಾಗವಹಿಸಿದರು ವಲಿಮ ಕಾರ್ಯಕ್ರಮ ಮುಗಿಯುವ ತನಕ ತನ್ನ ಪತ್ನಿಯ ನಿಧನದ ಸುದ್ದಿ ಯಾರಿಗೂ ತಿಳಿಸಿರಲಿಲ್ಲ. ಅಲ್ಲಾಹನು ಅವರೊಂದಿಗೆ ರಹ್ಮತ್ ಮತ್ತು ಮಗ್‍ಫಿರತ್‍ನೊಂದಿಗೆ ವರ್ತಿಸುವವನಾಗಲಿ. ಅವರ ಮಕ್ಕಳಿಗೆ ಸಹನೆಯನ್ನೂ ಧೈರ್ಯವನ್ನೂ ನೀಡಲಿ. ಅವರ ಒಳಿತುಗಳನ್ನು ಅವರ ಮಕ್ಕಳಲ್ಲಿಯೂ ಜಾರಿ ಗೊಳಿಸಲಿ. ಡಾಕ್ಟರ್ ಸಾಹಿಬರ ಮಾತೆ ಈಗ ಬಹಳ ರೋಗ ಬಾಧಿತೆಯಾಗಿದ್ದಾರೆ ಅಲ್ಲಾಹನು ಅವರಿಗೆ ಸಹ ರಹಮ್ ಮತ್ತು ಅನುಗ್ರಹ ದಯಪಾಲಿಸಲಿ – ಆಮೀನ್.

********************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಪ್ರಯೋಜನಕಾರಿ, ಆರಾಮದಾಯಕ ಮತ್ತು ಸಂತೋಷದಾಯಕವಾಗಿವೆ. ಅದಾಗ್ಯೂ ಜನಾಬ್ ರಸೂಲುಲ್ಲಾಹ್[ಸ] ರವರ ನಂತರ ಉಮ್ಮಾತಿನಲ್ಲಿ ಒಡಕುಂಟಾಯಿತು. ಅದರಿಂದ ಆ ಗುಣಗಳ ಐಕ್ಯಮತವೂ ಇಲ್ಲದಾಯಿತು. ಬದಲಾಗಿ ಆ ಗುಣ ಸಮೂಹವು ಛಿದ್ರ ವಿಛಿದ್ರವಾಗಿ ಹಂಚಿ ಹೋದವು. ಹೀಗಾಗಿ ಕೆಲವರು ಕೆಲವು ಗುಣಗಳನ್ನು ಸುಲಭವಾಗಿ ಸಾದರ ಪಡಿಸಬಹುದಾಗಿದೆ.

**ಆತ್ಮಶುದ್ಧಿ ಮತ್ತು ಜಯ**

ಅಲ್ಲಾಹನ ಉಪದೇಶವು ಹೀಗಿದೆ **ಖದ್ ಅಫ್‍ಲಹ ಮನ್ ಝಕ್ಕಾಹ. ವ ಖದ್ ಖಾಬ ಮನ್ ದಸ್ಸಾಹ** (ಅಶ್ಶಮ್ಸ್:10,11) "ಅದನ್ನು (ಆತ್ಮವನ್ನು) ಪರಿಶುದ್ಧವಾಗಿರಿಸಿದವನು. ಖಂಡಿತವಾಗಿಯೂ ಜಯಗಳಿಸಿದನು. ಅದನ್ನು ಮಣ್ಣುಗೂಡಿಸಿದವನು, ಖಂಡಿತವಾಗಿಯೂ ಪರಾಜಿತನಾದನು. ಫಲಹ್ "ಸೀಳು" ಎಂದರ್ಥವಾಗಿದೆ. ಕೃಷಿ ಕಾರ್ಯವನ್ನು ಬಲ್ಲಿರಾ, ಆತ್ಮಶುದ್ಧಿಯಲ್ಲಿಯೂ ತೃಪ್ತಿ ಇದೆ. ಪ್ರಯತ್ನಗಳು ಮಾನವನ ಆತ್ಮವನ್ನು ಅದರ ಕೆಡಕುಗಳಿಂದ ಮತ್ತು ಕಠಿಣತೆಗಳಿಂದ ಮುಕ್ತಗೊಳಿಸಿ ಸತ್ಯವಿಶ್ವಾಸದ ಬೀಜವನ್ನು ಬಿತ್ತುವಂತೆ ಅರ್ಹನನ್ನಾಗಿ ಮಾಡುತ್ತವೆ. ಮತ್ತೆ ಆ ವಿಶ್ವಾಸದ ವೃಕ್ಷವು ಫಲ ನೀಡಲು ಅರ್ಹರಾಗುತ್ತದೆ. ಏಕೆಂದರೆ ಪ್ರಾಥಮಿಕ ಹಂತಗಳಲ್ಲಿ ಸತ್ಯವಿಶ್ವಾಸಿಯನ್ನು ದೊಡ್ಡ ದೊಡ್ಡ ಆಪತ್ತುಗಳಿಂದ ಮತ್ತು ಕಠಿಣತೆಗಳಿಂದ ಹಾದು ಹೋಗಬೇಕಾಗುತ್ತದೆ. ಅದಕ್ಕಾಗಿಯೇ ಇದನ್ನು ಜಯ ಎಂದು ಕರೆಯಲಾಗಿದೆ. ಇನ್ನೊಂದೆಡೆ ಅಲ್ಲಾಹನು ನುಡಿದನು: **ಖುತಿಲಲ್ ಖರ್ರಾಸೂನಲ್ಲಝೀನ ಹುಮ್ ಫೀ ಗಮ್‍ರತಿನ್ ಸಾಹೂನ್** (ಅಝ್ಝಾರಿಯಾತ್: 11,12) ಊಹೆಕಟ್ಟುವವರು ನಾಶವಾದರು. ಅವರು ನಿರ್ಲಕ್ಷ್ಯದಲ್ಲಿ ಮುಳುಗಿದವರಾಗಿದ್ದಾರೆ. ಇದು ಅವಿಶ್ವಾಸಿಗಳ ಗುಣ ಎಂದು ಅಲ್ಲಾಹನು ಪ್ರಸ್ತಾಪಿಸಿದ್ದಾನೆ. ನಿರ್ಲಕ್ಷ್ಯತೆ ಎಂಬುದು ನಾವು ಹೋದಲ್ಲಿ ಕಾಣುವ ಹೊಟ್ಟು (ಭೂಸಾ) ಆಗಿದೆ. ಅಲ್ಲಾಹನು ಊಹೆ ಕಟ್ಟುವವರನ್ನು ಮತ್ತು ಗಾಳಿಸುದ್ದಿ ಹುಟ್ಟಿಸುವವರನ್ನು ನಾಶವಾದರು ಎಂದಿದ್ದಾರೆ. ಏಕೆಂದರೆ ಇನ್ನೂ ಅವರ ಆತ್ಮದ ಮೇಲೆ ನಿರ್ಲಕ್ಷ್ಯತೆಯ ಹೊದಿಕೆ ಬಿದ್ದಿವೆ. ಈ ವಚನದಲ್ಲಿ ಸತ್ಯವಿಶ್ವಾಸಿಗಳಿಗೆ ಎಚ್ಚರಿಸಲಾಗದೆ ಎಲ್ಲಿಯವರೆಗೆ ನೀವು ನಿರ್ಲಕ್ಷ್ಯತೆಯನ್ನು ದೂರ ಮಾಡುವುದಿಲ್ಲವೋ ದೂರದೃಷ್ಟಿ ಲಭಿಸುವುದಿಲ್ಲ. ಅವರು "ಊಯಿಲ್ ಅಬ್ಸರ್" (ದೂರ ದೃಷ್ಟಿಯುಳ್ಳವರು) ಎನ್ನಲಾಗುವುದಿಲ್ಲ. ನಾಶವಾದರು ಎಂದು ಹೇಳುವ ತಾತ್ಪರ್ಯವು ಕರುಣೆಯನ್ನು ಬಯಸುತ್ತದೆ. ಅಂದಹಾಗೆ ಸ್ವಯಂ ಕರ್ತನು ಆಗಿದ್ದಾನೆ. ಕರ್ತೃವು ಆಗಿದ್ದಾನೆ. ಎಂದರೆ ತನ್ನನ್ನು ತಾನು ನಾಶಪಡಿಸಿಕೊಂಡನು ಎಂದರ್ಥ. ಕೆಲವರಿಗೆ ಊಹಿಸುವ ಗುಣವಿರುತ್ತದೆ. ಅವರು ದೂರದೃಷ್ಟಿ ಹೊಂದಿರುವುದಿಲ್ಲ. ಬದಲಾಗಿ ಅನುಮಾನ ಮತ್ತು ಊಹೆಯಿಂದ ವರ್ತಿಸುತ್ತಾರೆ ಮತ್ತು ಇದನ್ನೇ ತಮ್ಮ ಘನತೆ ಎಂದು ಭಾವಿಸುತ್ತಾರೆ. ನನ್ನ ಉದ್ದೇಶವು ರಸೂಲುಲ್ಲಾಹ್[ಸ] ರವರ ಪರಿಪೂರ್ಣ ಮಾದರಿಯನ್ನು ಪ್ರಸ್ತುತಪಡಿಸುವುದಾಗಿತ್ತು.

ಅವರು ಪರಿಪೂರ್ಣ ವ್ಯಕ್ತಿಯಾಗಿದ್ದರು. ತದನಂತರ ವೈವಿಧ್ಯತೆಯ ಆಧಾರದಲ್ಲಿ ಅವರ ಗುಣಗಳನ್ನು ಗ್ರಹಿಸಲಾಯಿತು. ಒಬ್ಬನು ಒಂದಂಶವನ್ನು ಪಡೆದರೆ ಇನ್ನೊಬ್ಬನು ಇನ್ನೊಂದು ಅಂಶವನ್ನು ಪಡೆದನು. ಹೀಗೆ ಒಬ್ಬನಿಗೆ ಇನ್ನೊಬ್ಬನೊಂದಿಗೆ ಭಿನ್ನತೆಯುಂಟಾಯಿತು. ಯಾವ ರೀತಿ ಒಬ್ಬ ಕೃಷಿಕನಿಗೆ ಕೊಳೆ ತೆಗೆಯುವ ಅವಶ್ಯಕತೆ ಇರುತ್ತದೆಯೋ, ಇಲ್ಲದಿದ್ದರೆ ಬೆಳೆಗಳು ಸರಿಯಾಗಿ ಬೆಳೆಯುವುದಿಲ್ಲ. ಅಧೇ ರೀತಿ ಪ್ರತಿಯೊಬ್ಬ ಮನುಷ್ಯನಿಗೆ ತಾನು ಆಂತರಿಕ ಹೊಲಸನ್ನು ಕಳೆಯಬೇಕಾಗುತ್ತದೆ. ಇಲ್ಲದಿದ್ದರೆ ಇತರ ಒಳ್ಳೆಯ ಗುಣಗಳಿಂದಲೂ ವಂಚಿತರಾಗುವ ಅಪಾಯವಿರುತ್ತದೆ.

**(ಮಲ್ಫೂಝಾತ್ ಸಂಪುಟ–1, ಪುಟ–114 ರಿಂದ 117, ಮುದ್ರಣ 2018, ಖಾದಿಯಾನ್)**

---

*(ಪುಟ ಸಂಖ್ಯೆ 12ರ ವರದಿಯ ಉಳಿದ ಭಾಗ ಮುಂದು ವರಿಸಲಾಗಿದೆ)*

**ಫ್ರಾನ್ಸ್‌ಗೆ ಆಗಮನ**

ಸುಮಾರು 03:30 ಗಂಟೆಗಳ ಪ್ರಯಾಣದ ನಂತರ 6.30 ಗಂಟೆಗೆ ಹುಝೂರ್ ಫ್ರಾನ್ಸ್ ಜಮಾಅತಿನ ಹೊಸ ಕೇಂದ್ರವಾದ "ಬೈತುಲ್ ಅತಾ"ಕ್ಕೆ ಆಗಮಿಸಿದರು.

ಬೈತುಲ್ ಅತಾಕ್ಕೆ ಆಗಮಿಸಿದ ಹುಝೂರ್(ಅಬಿಅ) ಕಾರಿನಿಂದ ಹೊರ ಬರುತ್ತಲೇ ಫ್ರಾಂಸಿನ ವಿವಿಧ ಜಮಾಅತುಗಳಿಂದ ಬಂದ ಜಮಾಅತ್ ಬಾಂಧವರಾದ ಸ್ತ್ರೀ, ಪುರುಷರು, ಬಾಲಕ, ಬಾಲಕಿಯರು ಸಂಭ್ರಮದಿಂದ ತಮ್ಮ ಪ್ರಿಯ ಇಮಾಮರಿಗೆ ಸ್ವಾಗತ ಕೋರಿದರು. ಶ್ರದ್ಧಾಪೂರ್ವಕವಾಗಿ ಮತ್ತು ಪ್ರೀತಿಯಿಂದ ಎಲ್ಲೆಡೆ ಕೈಗಳು ಬೀಸತೊಡಗಿದ್ದರು ಮತ್ತು **ಅಹ್ಲನ್ ವ ಸಹ್‌ಲನ್ ಮರ್‌ಹಬ** ಎಂಬ ಸದ್ದು ಮೊಳಗುತ್ತಿತ್ತು.

ಒಂದೆಡೆ ಜಮಾಅತ್ ಬಾಂಧವರು ಸಂಭ್ರಮದಿಂದ ತಮ್ಮ ನೇತಾರರನ್ನು ಸ್ವಾಗತಿಸುತ್ತಿದ್ದರು. ಇನ್ನೊಂದೆಡೆ ಮಹಿಳೆಯರು ದರ್ಶನದ ಭಾಗ್ಯ ಪಡೆಯುತ್ತಿದ್ದರು. ಬಾಲಕ ಬಾಲಕಿಯರು ವಿವಿಧ ಗುಂಪುಗಳಾಗಿ ಸ್ವಾಗತ ಗೀತೆ ಮತ್ತು ಪ್ರಾರ್ಥನಾ ಗೀತೆಗಳನ್ನು ಓದುತ್ತಿದ್ದರು.

**ಬೈತುಲ್ ಅತಾ ಅನಾವರಣ:**

ಕಾರ್ಯಕ್ರಮದನ್ವಯ ಹುಝೂರ್(ಅಬಿಅ) ಫ್ರಾನ್ಸ್ ಜಮಾಅತಿನ ಈ ಹೊಸ ಕೇಂದ್ರ "ಬೈತುಲ್ ಅತಾ" ನಾಮಫಲಕದ ಪರದೆಯನ್ನು ಅನಾವರಣಗೊಳಿಸಿ ದುಆ ಮಾಡಿಸಿದರು. ದುಆದ ನಂತರ ತಮ್ಮ ವಸತಿ ನಿಲಯಕ್ಕೆ ತೆರಳಿದರು.

ತಮ್ಮ ಪ್ರಿಯ ಇಮಾಮರನ್ನು ಸ್ವಾಗತಿಸಲು ಬಂದ ಜಮಾಅತ್ ಬಾಂದವರು ಮತ್ತು ಕುಟುಂಬಗಳು ಪ್ಯಾರೀಸ್, Epetmay, ಸ್ಟ್ರಾಸ್‌ಬರ್ಗ್ ಮತ್ತು Lyon ನಿಂದ ಆಗಮಿಸಿದ್ದರು. ಪ್ಯಾರಿಸ್ ಜಮಾಅತ್ ಗಳಿಂದ ಬಂದವರು 80 ಕಿ.ಮೀ ಮತ್ತು Epetmay ನಿಂದ ಬಂದವರು ಒಂದು ನೂರು ಕಿ.ಮೀ ಸ್ಟ್ರಾಸ್‌ಬರ್ಗ್‌ನವರು 441 ಕಿ.ಮೀ ಹಾಗೂ Lion ನಿಂದ 449 ಕಿ.ಮೀ ದೂರದ ಪ್ರಯಾಣ ಬೆಳೆಸಿ ಆಗಮಿಸಿದ್ದರು.

ಈ ಕ್ಷೇತ್ರದ ಮೇಯರ್ ಆದ David Didier ಸಾಹಿಬ್ ರವರು ಹುಝೂರ್ ಅನ್ವರ್ ಅವರ ಸ್ವಾಗತಕ್ಕಾಗಿ ಆಗಮಿಸಿದ್ದರು. ಅವರು ಹುಝೂರರಿಗೆ ಸ್ವಾಗತ ಕೋರುತ್ತಾ ಹೇಳಿದರು. ತಾವು ಈ ಸಣ್ಣ ಕ್ಷೇತ್ರಕ್ಕೆ ಆಗಮಿಸಿದ್ದೀರಿ. ಹುಝೂರ್(ಅಬಿಅ) ಅನ್ವರ್ ಕೇಳಿದ ಮಾತಿಗೆ ಉತ್ತರಿಸುತ್ತ ಮೇಯರ್ ಹೇಳಿದರು. ನಾನು ಸ್ವಲ್ಪ ಕೆಳಭಾಗದಲ್ಲಿ ವಾಸಿಸುತ್ತೇನೆ. ಹುಝೂರ್ ಅವರಿಗೆ ಕೃತಜ್ಞತೆ ಅರ್ಪಿಸಿದರು.

ನಮಾಝ್‌ಗಳ ನಿರ್ವಹಣೆಗೋಸ್ಕರ ಇಲ್ಲಿ ತಳಭಾಗದ (Basement) ಸಭಾಂಗಣವನ್ನು ಮಸೀದಿಯ ರೂಪದಲ್ಲಿ ಉಪಯೋಗಿಸುತ್ತಾರೆ. ಅಲ್ಲಿ ನಾಲ್ಕುನೂರು ಜನರು ನಮಾಝ್ ನಿರ್ವಹಿಸಬಹುದಾದ ಅಂದಾಜು ಇದೆ.

ಅಹ್ಮದಿಯಾ ಜಮಾಅತ್ ಫ್ರಾಂಸ್‌ನ ಈ ಹೊಸ ಕೇಂದ್ರ "ಬೈತುಲ್ ಅತಾ" ಫ್ರಾಂಸ್ ರಾಜ್ಯದ Hants-De-Franceನ ಜಲ್ಸಾ Oise (department) ದ ನಗರ Time cheatan ನಲ್ಲಿದೆ. ಈ ಭೂಭಾಗದ ವಿಸ್ತೀರ್ಣ 55700 ಚ.ಮೀ ಸುಮಾರು ಆರು ಮುಕ್ಕಾಲು ಹೆಕ್ಟೇರ್ ಇದೆ. ಈ ಸ್ಥಳ 2014 ರಲ್ಲಿ 6 ಲಕ್ಷ ಇತ್ತು. ಅಂದರೆ ಸಾವಿರ ಯೂರೋಗಳಲ್ಲಿ ಖರೀದಿಸಲಾಗಿದೆ. ಈ ಸ್ಥಳ ಎತ್ತರದಲ್ಲಿದೆ. ಪ್ಯಾರಿಸ್‌ನ ಪ್ರಸಕ್ತ ಮೀಷನ್ ಹೌಸಿನಿಂದ 60 ಕಿ.ಮೀ ದೂರದಲ್ಲಿದೆ. Time ನಗರ ರೈಲ್ವೆ ನಿಲ್ದಾಣದಿಂದ 2 ಕಿ.ಮೀ ದೂರದಲ್ಲಿದೆ. ಈ ಸ್ಥಳವು ಒಂದು ರಷ್ಯನ್ ಕುಟುಂಬದ್ದಾಗಿತ್ತು. ಅವರು ಕದುರೆಗಳ ಹಾಗೂ ಪಕ್ಷಿಗಳ ವ್ಯಾಪಾರ ಮಾಡುತ್ತಿದ್ದರು.

ಅತಿ ಕಡಿಮೆ ಬೆಲೆಯಲ್ಲಿ ಈ ಸ್ಥಳ ದೊರೆತಿದ್ದು ಒಂದು ಪವಾಡವೇ ಸರಿ. ಹುಝೂರ್(ಅಬಿಅ) ಈ ಸ್ಥಳಕ್ಕೆ ಹೆಸರು ನಮೂದಿಸುವ ಸಮಯ ಅಮೀರ್ ಸಾಹಿಬ್ ಫ್ರಾನ್ಸ್‌ರೊಂದಿಗೆ ಹೇಳಿದರು. ಈ ನೆಲವು ಅಲ್ಲಾಹನು ನೀಡಿರುವಾಗ ಇದರ ಹೆಸರು "ಬೈತುಲ್ ಅತಾ" ಎಂದೇ ಇಡಿರಿ.

ಈ ವಿಶಾಲವಾದ ಭೂಮಿಯ ಮೇಲೆ ವಸತಿ ಭಾಗಗಳು ಮತ್ತು ಸಭಾಂಗಣ ಇತ್ಯಾದಿ ಮೊದಲಿನಿಂದಲೇ ನಿರ್ಮಿಸಲ್ಪಟ್ಟಿದೆ. ಇವೆಲ್ಲ ನಿರ್ಮಾಣ ಕಾರ್ಯಗಳು 1400 ಚ.ಮೀ ವಿಸ್ತೀರ್ಣದಲ್ಲಿ ನಿರ್ಮಿಸಲ್ಪಟ್ಟಿವೆ.

ಎರಡು ಅಂತಸ್ತಿನ ಒಂದು ವಿಶಾಲವಾದ ಕಟ್ಟಡವಾಗಿದೆ. ಅವರಲ್ಲಿ ಮೂರು ಸಭಾಂಗಣಗಳಿವೆ. ಮಹಿಳೆಯರು ತಮ್ಮ ಇಜ್‌ಮಾರ್‌ಗಳನ್ನು ವಸತಿ ಅಡುಗೆ ಮತ್ತು ಇತರ ಕಾರ್ಯಕ್ರಮಗಳು ಇವೆ. ಸಭಾಂಗಣಗಳಲ್ಲಿ ಆಚರಿಸಿಕೊಳ್ಳುತ್ತೇವೆ.

ಒಂದು ಬೃಹತ್ ಕಟ್ಟಡ ಅದರಲ್ಲಿ Basement ಹೊರತುಪಡಿಸಿ ಮೂರು ಅಂತಸ್ತುಗಳಿವೆ. ಅದರ ಎರಡು ಅಂತಸ್ತುಗಳನ್ನು ಅತಿಥಿಗೃಹವಿದೆ. ಅದರ ಸಂಖ್ಯೆ 9 ಇದೆ. ಮತ್ತು ನಾಲ್ಕು ಸ್ನಾನಗೃಹಗಳಿವೆ. ಅಂಗಳವಿದೆ ಮತ್ತು ಮೀಟಿಂಗ್ ರೂಮ್ ಇದೆ. ನೆಲಮಹಡಿಯಲ್ಲಿ ಬಹುದೊಡ್ಡ ಜಮಾಅತ್‌ನ ಅಡುಗೆ ವ್ಯವಸ್ಥೆ ಇದೆ. ಅದಾಗ್ಯೂ ಇನ್ನೂ Basement ಉಪಯೋಗಿಸುತ್ತಿಲ್ಲ. ಆದರೆ ಕಟ್ಟಡಕ್ಕೆ ಲಗತ್ತಿಸಿರುವ ಕಟ್ಟಡದಲ್ಲಿ ಪ್ರಚಾರ ವಿಭಾಗ ಮತ್ತು H.F. ನ ಕಚೇರಿಗಳಿವೆ. Book store ಸಹ ಇದೆ. ಇನ್ನೊಂದು ಭಾಗದಲ್ಲಿ ಸ್ನಾನಗೃಹಗಳು ಮತ್ತು ವುಝು ಮಾಡವ ಸ್ಥಳಗಳಿವೆ.

ಇನ್ನೊಂದು ಕಟ್ಟಡದಲ್ಲಿ ವಸತಿ ಮಹಡಿಗಳಿವೆ. ಅದೇ ಕಟ್ಟಡಕ್ಕೆ ಹೊಂದಿಕೊಂಡು ಒಂದು ಸಭಾಂಗಣ ಮಸೀದಿ ಉಪಯೋಗಕ್ಕಾಗಿ ತಯಾರಿಸಲಾಗಿದೆ. ಅದರಲ್ಲಿ ನಾಲ್ಕು ನೂರಕ್ಕಿಂತ ಹೆಚ್ಚಿನ ಜನರು ನಮಾಝ್ ಮಾಡಬಹುದಾಗಿದೆ.

ಮೂರು ವಿವಿಧ ಕಟ್ಟಡಗಳ ನಡುವಿನ ಸ್ಥಳವನ್ನು ಸಮತಟ್ಟಾಗಿ ಮಾಡಲಾಗಿದೆ. ಅದರ ಮೇಲೆ ಒಂದು ಶೆಡ್ ಹಾಕಲಾಗಿದೆ. ಆ ಶೆಡ್ಡಿನ ಒಳಗೂ ಸಂದರ್ಭಾನುಸಾರವಾಗಿ ಸುಮಾರು ಮುನ್ನೂರು ಜನರು ನಮಾಝ್ ಮಾಡಬಹುದಾಗಿದೆ. ಅಂತೆಯೇ ನೂರಾರು ಜನರು ಊಟವು ಮಾಡಬಹುದಾಗಿದೆ. ಅದಲ್ಲದೇ ಈ ವಿಶಾಲವಾದ ಭೂಭಾಗದಲ್ಲಿ ವಿವಿಧ ಸ್ಥಳಗಳಲ್ಲಿ ಕೆಲವು Huts ಮಾಡಲ್ಪಟ್ಟಿವೆ.

ಈ ಭೂಭಾಗದ ಬಲಗಡೆ ಮತ್ತು ಮುಂದಿನ ಭಾಗದಲ್ಲಿ ಹೊಲಗಳಿವೆ. ಎಡಭಾಗದಲ್ಲಿ ಒಂದು ನೆರೆಹೊರೆಯವರ ಮನೆ ಇದೆ.

ಈ ಭೂಭಾಗದ ಹಿಂದಿನ ಭಾಗದಲ್ಲಿ ಜಲ್ಸ ಸ್ಥಳವಿದೆ. ಒಂದು ಬಹು ದೊಡ್ಡ ದಟ್ಟ ಕಾಡು ಇದೆ. ಅದರ ವಿಸ್ತೀರ್ಣ ಸುಮಾರು ಎರಡು ಲಕ್ಷ ಇಪ್ಪತ್ತು ಸಾವಿರ ಚ.ಮೀ ಇದೆ. ಅದರ ಬೆಲೆ ಒಂದು ಲಕ್ಷ ಯೂರೋ ಆಗಿದೆ. ಹುಝೂರ್ ಇದನ್ನು ಖರೀದಿಸಲು ಅನುಮತಿ ನೀಡಿರುತ್ತಾರೆ. ಫ್ರಾಂಸ್ ಜಮಾಅತ್ ಇದಕ್ಕಾಗಿ ಹತ್ತು ಸಾವಿರ ಯೂರೋ ಮುಂಗಡವಾಗಿ ನೀಡಿದೆ. ಈ ಕಾಡಿನ ರಸ್ತೆ ನಮ್ಮ ಭೂಭಾಗಕ್ಕೆ ಹೊಂದಿಕೊಂಡಿದೆ. ಯಾರಿಗಾದರೂ ಕಾಡಿಗೆ ಹೋಗಬೇಕಾದರೆ ನಮ್ಮ ಭೂಭಾಗದಿಂದಲೇ ಹಾದು ಹೋಗಬೇಕಾಗುತ್ತದೆ. ಆ ಕಾರಣದಿಂದಲೇ ಇದನ್ನೂ ಖರೀದಿಸುವ ನಿರ್ಣಯ ಕೈಗೊಳ್ಳಲಾಗಿದೆ.

ಫ್ರಾಂಸ್‌ನ ರಾಜಧಾನಿ ಪ್ಯಾರಿಸ್‌ನಿಂದ ಕೇವಲ 60 ಕಿ.ಮೀ ದೂರದಲ್ಲಿ ಕೇವಲ 6 1/2 ಲಕ್ಷ ಯೂರೋಗಳಲ್ಲಿ ಇಷ್ಟೊಂದು ದೊಡ್ಡ ಭೂಭಾಗದ ಖರೀದಿಸಿ, ಅದರಲ್ಲಿ ಹಲವು ವಿಶಾಲ ಕಟ್ಟಡಗಳನ್ನು ನಿರ್ಮಿಸಲಾಗಿದೆ ಎಂದರೆ ಅಶ್ಚರ್ಯಕರವಾಗಿದೆ.

ಇಷ್ಟು ಬೆಲೆಯಲ್ಲಿ ಅಂತೂ ಮೂರು ಅಂತಸ್ತಿನ ಕಟ್ಟಡಗಳು ದೊರೆಯಲಾರರು. ಆದರೆ ಈ ಹದಿನಾಲ್ಕು ಸಾವಿರ ಚ.ಮೀ ಅದರ ಮೇಲೆ ಉತ್ತಮವಾದ ಕಟ್ಟಡಗಳು ಇವೆ. ವಿಶಾಲವಾದ ಭೂಭಾಗ, ಜಲ್ಸ ಸ್ಥಳ ಮತ್ತು ಅದಕ್ಕೆ ಸಂಬಂಧಿಸಿದ ವ್ಯವಸ್ಥೆಗಳಿವೆ. ಇದು ಕೇವಲ ಅಲ್ಲಾಹನ ಅನುಗ್ರಹಗಳಿಂದ ಮಾತ್ರ ಸಾಧ್ಯವಾಗಿದೆ. ಇದು ಅಲ್ಲಾಹನ ಪಾರಿತೋಷಕವಾಗಿದೆ. ಮತ್ತು ಇದು ಜಮಾಅತ್ತಿನ ಅನುಗ್ರಹದ ಫಲವಾಗಿದೆ.

ಇದರ ಖರೀದಿಗೆ ಕೆಲವು ಅಡಚಣೆಗಳೂ ಇದ್ದವು. ಆದರೆ ಹುಝೂರ್ ಅನ್ವರ್(ಅಬಿಅ)ರವರ ಪ್ರಾರ್ಥನೆಗಳಿಂದಾಗಿ ಎಲ್ಲವು ದೂರಾದವು. ಅಂತಿಮವಾಗಿ ಈ ಸ್ಥಳ ಜಮಾಅತಿಗೆ ದೊರೆತಿದೆ. 22 ಏಪ್ರಿಲ್ 2014 ರಂದು ಈ ಸ್ಥಳವು ಜಮಾಅತಿನ ಹೆಸರಿನಲ್ಲಿ ರಿಜಿಸ್ಟ್ರರ್ ಮಾಡಲಾಗಿದೆ. ಅಲ್‌ಹಮ್ದುಲಿಲ್ಲಾಹ್ ಅಲಾ ಝಾಲಿಕ್.

ಅಮೀರ್ ಸಾಹಿಬ್ ಫ್ರಾಂಸ್ ಮುಕರ್ರಮ್ ಅಶ್ಫಾಕ್ ರಬ್ಬಾನಿ ಸಾಹಿಬ್ ಈ ಸ್ಥಳದ ಖರೀದಿಯ ಬಾಬ್ತು ಹೇಳುತ್ತಾರೆ. ಹುಝೂರ್ ಅನ್ವರ್ ಅವರ ಅನುಮತಿಯ ನಂತರ ಒಂದು ವಿಶಾಲ ಸ್ಥಳ ಹುಡುಕುತ್ತಿದ್ದೆವು. ಒಂದು ಏಜೆನ್ಸಿಯು ಆರು ಮುಕಾಲು ಎಕರೆ ಭೂಮಿ ಅದರಲ್ಲಿ ನಿರ್ಮಿತವಾದ ಮಾರಾಟಕ್ಕಿದೆ ಎಂದು ಅವರೊಂದಿಗೆ ಸಂಪರ್ಕಿಸಿದ ನಂತರ ಅವರ ಮಾಲಿಕರಿಗೆ ಆರು ಲಕ್ಷ ನಲವತ್ತು ಸಾವಿರ ಯೂರೋಗಳಲ್ಲಿ ಒಪ್ಪಂದವಾಯಿತು. ತದನಂತರ ಹುಝೂರರ ಸೇವೆಯಲ್ಲಿ ಅನುತಿಗಾಗಿ ಬರೆಯಲಾಗಿತ್ತು. ಹುಝೂರ್ ಅನ್ವರ್ ಹೇಳಿದರು. ತೆಗೆದುಕೊಳ್ಳಿ.

ಆಗ ನಾವು ಎಪ್ಪತ್ತು ಸಾವಿರ ಯೂರೋಗಳನ್ನು ಮುಂಗಡವಾಗಿ ಕೊಟ್ಟ ಹೆಸರು ವರ್ಗಾವಣೆಗೋಸ್ಕರ ಕಾನೂನಾತ್ಮಕ್ರಮಗಳು ಪ್ರಾರಂಭವಾಯಿತು. ಇದರ ಸೂಚನೆ ಕೋರ್ಟಿನಿಂದ ನಮಗೆ ತಿಳಿಸಲಾಯಿತು. ಈ ಮಹಿಳೆಗೆ ತನ್ನ ಮನೆ ಮತ್ತು ಈ ಸ್ಥಳ ಮಾರಾಟ ಮಾಡುವ ಅನುಮತಿ ಇಲ್ಲ. ಏಕೆಂದರೆ ಆಕೆ ಬ್ಯಾಂಕ್‌ಗೆ ವಂಚನೆ ಮಾಡಿರುತ್ತಾಳೆ. ಈ ಮಾತು ಮಹಿಳೆಗೆ ತಿಳಿಸಿದರೆ ಆಕೆ ಸಿಟ್ಟಿಗೆ ಬಂದು ಬಹಳ ಕೆಟ್ಟದಾಗಿ ವರ್ತಿಸಿದಳು. ಅವಳು ಅನೇಕ ಜಾನುವಾರುಗಳನ್ನು ಸಾಕಿದ್ದಳು. ನಾನು ನಿಮ್ಮ ಮೇಲೆ ನಾಯಿಗಳನ್ನು ಬಿಡುವೆನು ಎಂದು ಹೇಳಿದಳು.

ಇನ್ನೊಂದೆಡೆ ಬ್ಯಾಂಕ್ ನ್ಯಾಯಾಲಯದಿಂದ ಹರಾಜು ಹಾಕಲು ಅನುಮತಿ ಕೋರಿತು. ನಮಗೆ ಹರಾಜಿಲಿ ಭಾಗವಹಿಸುವ ಅನುಮತಿ ದೊರೆಯಲಿಲ್ಲ. ಅಲ್ಲಾಹನ ಉಪಕಾರ ಹೀಗಾಯಿತು. ಹರಾಜಿನ ಮೊದಲ ಸುತ್ತಿನಲ್ಲಿ ಯಾರೂ ಬರಲಿಲ್ಲ. ಏಕೆಂದರೆ ಎರಡನೆಯ ಸುತ್ತಿನಲಿ ಬೆಲೆ ಕಡಿಮೆ ಮಾಡಲಾಗುತ್ತಿದೆ. ಆ ಸ್ಥಳದ ಮಾಲಕಿಗೆ ಚಿಂತೆಯಾಯಿತು. ಕಡಿಮೆ ಬೆಲೆಗೆ ಹರಾಜಾಗದೇ ನನಗೆ ಏನೂ ಸಿಗುವುದಿಲ್ಲ. ಆಗ ಆಕೆ ನ್ಯಾಯಾಲಯದ ಮೊರೆ ಹೋದರು. ನನಗೆ ಎರಡು ಸಣ್ಣ ವಯಸ್ಸಿನ ಮಕ್ಕಳಿದ್ದಾರೆ. ಪತಿ ಜೈಲಿನಲ್ಲಿದ್ದಾನೆ. ನ್ಯಾಯಾಲಯದಿಂದ ಸಹಾಯ ಕೋರಿದರು

ಈಗ ಈ ಸ್ಥಳದ ಮಾರಾಟ ಕುರಿತು ಆತಂಕಗಳು ಹೆಚ್ಚಾಗತೊಡಗಿತು. ನಾವು ಕೆಲವು ಸಜ್ಜನ ಪುರುಷರಿಗೆ ಪ್ರಾರ್ಥನೆಗೋಸ್ಕರ ಪತ್ರಗಳನ್ನು ಬರೆದೆ. ಸಜ್ಜನರೊಬ್ಬರು ಪತ್ರವೊಂದು ಹೀಗೆ ಕೈದೋರಿತು. ನೀವು ಹೀಗೆ ಪ್ರಾರ್ಥಿಸಿರಿ. ಓ ಅಲ್ಲಾಹನೆ! ಖಲೀಫತುಲ್ ಮಸೀಹ್ ಹೇಳುತ್ತಾರೆ. "ತೆಗೆದುಕೊಳ್ಳಿ" ಆದರೆ ಜರು ತೆಗೆದುಕೊಳ್ಳಲು ಬಿಡುತ್ತಿಲ್ಲ. ಹೀಗಾಗಿ ನಮ್ಮ ಪ್ರಾರ್ಥನೆಗಳಿಗೆ ಬಲ ಬರತೊಡಗಿತು.

ಒಂದು ದಿನ ನ್ಯಾಯಾಧೀಶರು ಆ ಮಹಿಳೆಗೆ ಹೇಳಿದರು. ಅಹ್ಮದಿಯರೊಡನೆ ಮಾತನಾಡಿ, ಆಗ ಆ ಮಾಲಕಿಯಾದ ಮಹಿಳೆ ಹೇಳಿದರು. ನಾನು ಅಹ್ಮದಿಯರೊಡನೆ ಕೆಟ್ಟದಾಗಿ ವರ್ತಿಸಿದರೇನೆ. ಹೇಗೆ ಮಾತನಾಡಲಿ. ಆಗ ನ್ಯಾಯಾಧೀಶರು ಹೇಳೀದರು. ಇದನ್ನು ಬಿಟ್ಟರೆ ನಿಮಗೆ ಬೇರೆ ದಾರಿ ಇಲ್ಲ. ಆಗ ಆ ಮಹಿಳೆ ಒಂದು ದಿನ ರಾತ್ರಿಯ ಸಮಯ ನಮ್ಮ ಬಳಿಗೆ ಬಂದರು. ಕ್ಷಮೆ ಯಾಚಿಸಿದರು ಮತ್ತು ಹೇಳಿದಳು. ನೀವು ಈ ಸ್ಥಳ ತೆಗೆದುಕೊಳ್ಳಿ. ನಾನು ನ್ಯಾಯಾಲಯದಲ್ಲಿ ಮಾತನಾಡಿದ್ದೇನೆ.

ಅನಂತರ ನ್ಯಾಯಾಲಯವು ಒಂದು ನೋಟೀಸ್ ಜಾರಿ ಮಾಡಿತು. ಈ ಸ್ಥಳವು ನಾವು ಅಹ್ಮದಿಯಾ ಜಮಾಅತಿಗೆ ಕೊಡುತ್ತಿದ್ದೇವೆ. ಯಾರಿಗಾದರೂ ಆಕ್ಷೇಪವಿದ್ದರೆ ಒಂದು ತಿಂಗಳೊಳಗೆ ನ್ಯಾಯಾಲಯವನ್ನು ಸಂಪರ್ಕಿಸಬಹುದು. ಇಲ್ಲವಾಗಿದ್ದಲ್ಲಿ ಈ ಸ್ಥಳ ಅಹ್ಮದಿಯಾ ಜಮಾಅತಿಗೆ ನೀಡಲಾಗುವುದು. ಆದರೆ ಯಾರಿಂದಲೂ ಯಾವುದೇ ಆಕ್ಷೇಪ ಬರಲಿಲ್ಲ. ಕಾರಣ ನ್ಯಾಯಾಲಯ ರಿಜಿಸ್ಟ್ರಿ ತಾರೀಖು ನಿಗದಿಗೊಳಿಸಿತು.

ತಾರೀಖು ನಿಗದಿಯಾದ ಬಳಿಕ ನಾನು ಆ ಮಹಿಳೆಗೆ ಹೇಳಿದೆವು. ಮನೆ ಕೀಲಿಗಳನ್ನು ತೆಗೆದುಕೊಂಡು ಬನ್ನಿ. ಆದರೆ ಆಕೆ ಹೇಳಿದಳು. ಎರಡು ಮಕ್ಕಳನ್ನು ತೆಗೆದುಕೊಂಡು ಎಲ್ಲಿಗೆ ಹೋಗಲಿ, ಆಗ ನಾವು ಆಕೆಗೆ ಕ್ರಯದ ಮನೆ ಮಾಡಿಕೊಡಲು ಹೇಳಿದೆವು. ಕ್ರಯದ ಮೊತ್ತ ಅದರ ಮೊತ್ತದಿಂದ ಕಡಿತಗೊಳಿಸಲಾಯಿತು. ಮನೆಯನ್ನು ನೋಡಿ ಹೇಳೀದರು. ಇದರ ಬಣ್ಣ ನನಗೆ ಮೆಚ್ಚುಗೆ ಇಲ್ಲ. ಖುದ್ದಾಮ್ ಅವಳಿಗೆ ಮೆಚ್ಚುಗೆ ಇರುವ ಬಣ್ಣ ಬಳಿದುಕೊಟ್ಟರು. ಮತ್ತು ಹೇಳಿದಳು. ಸಾಮಾನು ಎತ್ತಲು ವಾಹನವಿಲ್ಲ. ಖುದ್ದಾಮ್ ಅದರ ವ್ಯವಸ್ಥೆಯು ಮಾಡಿದರು.

ಅಮೀರ್ ಸಾಹೆಬ್ ಹೇಳುತ್ತಾರೆ. ರಿಜಿಸ್ಟ್ರಿ ದಿನ ಹಸ್ತಕ್ಷರ ಮಾಡುವ ಸಮಯ ಹೇಳೀದರು. ನಾನು ಯಾವ ಕೆಲಸವು ದುಆ ಮಾಡದೇ ಮಾಡುವುದಿಲ್ಲ. ಆದ್ದರಿಂದ ದುಆ ಮಾಡುವೆ ಮತ್ತು ಹಸ್ತಕ್ಷರ ಹಾಕುವೆ. ಆಗ ನಿಮಿತ್ತಗೊಂಡ ಸರಕಾರಿ ಅಧಿಕಾರಿ ಹೇಳಿದ. ಇದು ಸರಕಾರಿ ಸಂಸ್ಥೆಯಾಗಿದೆ. ದುಆ ಮಾಡಲು ಅನುಮತಿ ನೀಡುವುದಿಲ್ಲ. ನಾನು ಹೇಳಿದೆ ದುಆ ಮಾಡದೇ ಈ ಸ್ಥಳ ತೆಗೆದುಕೊಳ್ಳುವುದಿಲ್ಲ. ಆಗ ಮಾಲಕಿ ಹೈರಣಾದಳು. ಮತ್ತು ಬೈಂಕಿನವರೂ ಹೈರಣಾದರು. ಏಕೆಂದರೆ ಈ ಮೊತ್ತ ಕೈ ಜಾರುತ್ತಿತ್ತು. ಆಗ ಆ ಮಹಿಳ ಫ್ರೆಂಚ್ ಭಾಷೆಯಲ್ಲಿ ಪದೇ ಪದೇ ಹೇಳುತ್ತಿದ್ದಳು.

"ತೆಗೆದುಕೊಳ್ಳಿ" ದಯವಿಟ್ಟು ತೆಗೆದುಕೊಳ್ಳಿ, ಇವು ಪದಗಳು ಹುಝೂರ್ ಹೇಳಿದ ಪದಗಳೇ ಆಗಿದ್ದವು. ಆಕೆ ಆ ಪದಗಳನ್ನೆ ಪದೇ ಪದೇ ಉಚ್ಚರಿಸುತ್ತಿದ್ದಳು. ಆಗ ಇದನ್ನೆಲ್ಲ ಕಚೇರಿಯ ಜನರು ನೋಡುತ್ತಿದ್ದರು. ಆ ಜನರು ನನಗೆ ಹೇಳಿದರು. ನಿಮಗೆ ಏನು ಪ್ರಾರ್ಥನೆ ಮಾಡಬೇಕಾಗಿದೆ. ಆಗ ನಾನು ಹೇಳಿದೆ. ನನಗೆ ಪ್ರಾರ್ಥನೆ ಮಾಡಬೇಕಾಗುದೇನೆಂದರೆ " ಈ ಸ್ಥಳವು ಇಸ್ಲಾಂ ಮತ್ತು ಮಾನವೀಯತೆಯ ಬಹು ದೊಡ್ಡ ಕೇಂದ್ರವಾಗಲಿ ಎಂದು. ಆಗ ನ್ಯಾಯಾಧೀಶರು ಹೇಳಿದರು. ಇದೇ ಮಾತಾಗಿದ್ದರೆ ನಾನೂ ಪ್ರಾರ್ಥಿಸುತ್ತೇನೆ.

ಹೀಗೆ ಸಹಿಯನ್ನು ಮಾಡಲಾಯಿತು. ಮತ್ತು ಈ ಸ್ಥಳವು ಕಾನೂನಾತ್ಮಕವಾಗಿ ರಿಜಿಸ್ಟರ್ ಆಯಿತು. ಅಲ್ಲಾಹನು ತನ್ನ ಖಲೀಫರಿಂದ ಉಚ್ಚರಿಸಲ್ಪಟ್ಟ ಶಬ್ದಗಳನ್ನು ಅಕ್ಷರಶಃ ಪೂರ್ತಿಗೊಳಿಸಿದನು. ಹೀಗೆ ಅಲ್ಲಾಹನು ನಮಗೆ ಈ ಸ್ಥಳ ದಯಮಾಲಿಸಿತು. ಆದ್ದರಿಂದ ಹುಝೂರ್ ಇದರ ಹೆಸರು "ಬೈತುಲ್ ಅತಾ" ಎಂದು ಕರೆದರು.

ಇಂದು ಬುಧವಾರ ದಿನ ಹಾಲೆಂಡಿನ ಒಂದು ರೀಜಿನಲ್ ಟಿ.ವಿ "Omroep flevoland" ಹೀಗೆ ಸುದ್ದಿ ಪ್ರಕಟಿಸಿತು. ಅಲ್ಮಿರೆಯಲ್ಲಿ ಅಹ್ಮದಿಯಾ ಮಸೀದಿಯ ಉದ್ಘಾಟನೆ.

ಮಂಗಳವರ ದಿನ "ಬೈತುಲ್ ಆಫಿಯತ್" ಉದ್ಘಾಟನೆಗೊಂಡಿತು. ಈ ಮಸ್ಜಿದ್ ಅಹ್ಮದಿಯಾ ಜಮಾಅತಿನದ್ದಾಗಿದೆ. ಇದು ಪಾಕಿಸ್ತಾನಕ್ಕೆ ಸಂಬಂಧಿಸಿದ ಇಸ್ಲಾಮ್ ಜಮಾಅತ್ ಆಗಿದೆ. ಅವರ ವಿಶ್ವಾಸವಿದೆ. ಆಮಾಅತಿನ ಸ್ಥಾಪಕರು ವಾಗ್ದತ್ತ ಮಸೀಹರಾಗಿದ್ದಾರೆ. ಮುಹಮ್ಮದ್ ರಸೂಲುಲ್ಲಾಹ್(ಸ) ರವರು ಭವಿಷ್ಯ ನುಡಿದತೆ ಆಗಮಿಸುತ್ತಾರೆ.

ಮಸೀದಿಯ ಉದ್ಘಾಟನೆಯು ಜಮಾಅತಿನ ಖಲೀಫರಾದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಮಾಡಿದರು. ಇವರು ಪ್ರಸಕ್ತ ಜಾಗತಿಕ ಜಮಾಅತಿನ ನೇತರರಾಗಿದ್ದಾರೆ. ಅಹ್ಮದಿಯರು ತಮ್ಮ ಖಲೀಫರನ್ನು ಲೋಕದ ಸರ್ವಶ್ರೇಷ್ಠ ವ್ಯಕ್ತಿ ಎಂದು ಭಾವಿಸುತ್ತಾರೆ. ಖಲೀಫರು ಇಲ್ಲಿ ಆಗಮಿಸಿದ ಕಾರಣ ಇಲ್ಲಿಯ ಜನರು ತುಂಬ ಸಂತುಷ್ಟರಾಗಿದ್ದಾರೆ. ಈ ಸಮಾರಂಭದಲ್ಲಿ ಅಹ್ಮದಿಯೇತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಅವರಿಗೆ "ಇಶಾಯಿಅ (Dinner) ಕೊಡಲಾಯಿತು. ಅಹ್ಮದಿಯಾ ಜಮಾಅತಿನವರು ಇತರ ಧಾರ್ಮಿಕ ಜಮಾಅತ್‌ರೊಡನೆ ಸಂಪರ್ಕಿಸಲು ಸಿದ್ಧರಿರುತ್ತಾರೆ. ಧಾರ್ಮಿಕ ಸಮಾನತೆಯನ್ನು ಪ್ರೋತ್ಸಾಹ ನೀಡುತ್ತಾರೆ. ಅಲ್ಮಿರೆಯಲ್ಲಿ ಸುಮಾರು 80 ಅಹ್ಮದಿಯರಿದ್ದಾರೆ. ದೇಶದಲ್ಲಿ ಸುಮಾರು ಹದಿನೈದು ನೂರು.

*******************

**3 ಅಕ್ಟೋಬರ್ 2019 (ಗುರುವಾರ)**

ಹುಝೂರ್ ಅನ್ವರ್ (ಅಬಿಅ) ಮುಂಜಾನೆ 6 ಗಂಟೆ 45 ನಿಮಿಷಕ್ಕೆ ಸಭಾಂಗಣದಲ್ಲಿ ಆಗಮಿಸಿ ಫಜರ್ ನಮಾಝ್ ಓದಿಸಿದರು. ನಮಾಝ್ ಆದ ನತರ ಹುಝೂರ್ ವಸತಿ ನಿಲಯಕ್ಕೆ ತೆರಳಿದರು. ಮುಂಜಾನೆಯ ವೇಳೆ ಹುಝೂರ್ ಕಚೇರಿಯ ಕಾರ್ಯಗಳನ್ನು ನಿರ್ವಹಿಸಿದರು.

ಕಾರ್ಯಕ್ರಮದನ್ವಯ ಎರಡು ಗಂಟೆಗೆ ಹುಝೂರ್ ಸಭಾಂಗಣಕ್ಕೆ ಆಗಮಿಸಿ ಝುಹರ್ ಅಸರ್ ನಮಾಝುಗಳನ್ನು ಜಮಾಗೊಳಿಸಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿನಿಲಯಕ್ಕೆ ತೆರಳಿದರು. ಆನಂತರವೂ ಹುಝೂರ್ ಕಚೇರಿ ಕಾರ್ಯಗಳನ್ನು ನಿರ್ವಹಿಸಿದರು.

**ಕುಟುಂಬ ಭೇಟಿಗಳು:**

ಕಾರ್ಯಕ್ರಮದನ್ವಯ 6 ಗಂಟೆಗೆ ಹುಝೂರ್ ತಮ್ಮ ಕಚೇರಿಗೆ ಆಗಿಸಿದರು. ಮತ್ತು ಕುಟುಂಬ ಭೇಟಿಗಳನ್ನು ಪ್ರಾರಂಭಿಸಿದರು. ಇಂದು ಭೇಟಿಯಾಗುವ ಕುಟುಂಬಗಳು 45 ಕುಟುಂಬಗಳಲಿಲ 160 ಜನರಿದ್ದರು. ಇವರೆಲ್ಲರೂ ಹುಝೂರೊಡನೆ ಭೇಟಿಯಾಗುವ ಭಾಗ್ಯ ಪಡೆದರು. ಹುಝೂರ್ ವಿದ್ಯೆ ಪಡೆಯುತ್ತಿರುವ ಎಲ್ಲ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಲೇಖನಿ (pen) ಉಡುಗೊರೆ ನೀಡಿದರು. ಹಾಗೆಯೇ ಪ್ರೀತಿಪೂರ್ವಕವಾಗಿ ಸಣ್ಣ ವಯಸ್ಸಿನ ಮಕ್ಕಳೀಗೆ ಚಾಕ್ಲೇಟ್ ನೀಡಿದರು.

ಇಂದು ಭೇಟಿಯಾಗುವ ಈ ಕುಟುಂಬಗಳು ಪ್ಯಾರಿಸಿನ ಐದು ಜಮಾಅತುಗಳಿಂದ 80 ಕಿ.ಮೀ ದೂರದ ಪ್ರಯಾಣ ಬೆಳೆಸಿ ಬಂದಿದ್ದರು. ಜಮಾಅತಿನಿಂದ ಬಂದ ಬಾಂಧವರು ಒಂದು ನೂರು ಕಿ.ಮೀ ದೂರದಿಂದ ಬಂದು ತಲುಪಿದ್ದರು. ಇವರೆಲ್ಲರೂ ಪ್ರಿಯ ಇಮಾಮರ ಭೇಟಿಯ ಭಾಗ್ಯ ಪಡೆದುದಲ್ಲದೇ ಅಲ್ಲಿಂದ ಅಸಂಖ್ಯೆಯ ಅನುಗ್ರಹಗಳಿಂದ ಅನುಗ್ರಹಿತರಾಗಿ ಹೊರ ಬಂದರು. ಅನಾರೋಗ್ಯದಿಂದ್ದವರು ಆರೋಗ್ಯದ ದುಆ ಪಡೆದರು. ವಿವಿಧ ಸಮಸ್ಯೆಗಳಿಗೆ ತುತ್ತಾದ ಜನರು ತಮ್ಮ ಕಷ್ಟಗಳನ್ನು ದೂರವಾಗುವಂತೆ ದುಆ ಮಾಡಲು ಹೇಳೀ ಸಂತೃಪ್ತಿಗೊಂಡು ನಗುಮುಖದಿಂದ ಹೊರ ಬಂದರು. ವಿದ್ಯಾರ್ಥಿ ವಿದ್ಯಾರ್ಥಿನಿಯರು ತಮ್ಮ ಉನ್ನತದರ್ಜೆ ಫಲಿತಾಂಶಕ್ಕಾಗಿ ದುಆ ಯಾಚಿಸಿ ಸಂತೃಪ್ತರಾಗಿ ಹೊರಬಂದರು. ಅಂತೂ ಪ್ರತಿಯೊಬ್ಬರೂ ಪ್ರಿಯ ಇಮಾಮರ ದುಆ ಪಡೆದರು. ಸಂತೃಪ್ತರಾಗಿ ಹೊರ ಬಂದರು.

ಒಂದು ಆಫ್ರಿಕನ್ ಕುಟುಂಬ ಭೇಟಿ ಮಾಡಿ ಕಚೇರಿಯಿಂದ ಹೊರ ಬಂದಾಗ ಆ ಕುಟುಂಬ ಮುಖ್ಯಸ್ಥರಾದ ಹಾಫಿಜ್ ಸಲೀಮ್ ತೋರೆ ಸಾಹಿಬ್ ಹೇಳಿದರು. ಇಂದು ನಾನು ತುಂಬ ಸಂತುಷ್ಟನಾಗಿದ್ದೇನೆ. ಪ್ರಿಯ ಇಮಾಮರ ಸಾನಿಧ್ಯ ಭಾಗ್ಯ ನಮಗೆ ದೊರೆತಿದೆ. ಈಗ ನನ್ನ ಹೃದಯ ಭಾವನೆಗಳ ಯಾವ ಸ್ಥಿತಿ ಇದೆ. ಅದನ್ನು ಹೇಳಲು ಸಾಧ್ಯವಿಲ್ಲ. ನನ್ನ ಹೃದಯ ಕೃತಜ್ಞತ

ಭಾವನೆಗಳಿಂದ ತುಂಬಿ ಹೋಗಿದೆ. ಕೇವಲ ಇಷ್ಟು ಮಾತ್ರ ಹೇಳಬಲ್ಲೆ. ಅಲ್‌ಹಮ್ದುಲಿಲ್ಲಾಹ್, ಅಲ್‌ಹಮ್ದು ಲಿಲ್ಲಾಹ್.

ಪಾಕಿಸ್ತಾನದಿಂದ ಬಂದ ಮಿತ್ರರೊಬ್ಬರು ಇಮ್ರನ್ ಅಹ್ಮದ್ ಸಹಿಬ್ ಹೇಳಿದರು. ಇಂದಿನ ಈ ಭೇಟಿಯು ನನ್ನ ಜೀವನದ ಅತ್ಯಂತ ಅದೃಷ್ಟದ ಕ್ಷಣವಾಗಿದೆ. ನಾನು ಯಾವಾಗಲೂ ಈ ಪ್ರಾರ್ಥನೆ ಮಾಡುತ್ತಿದ್ದೆ. ಎಂದಾದರೂ ನನ್ನ ಜೀವನದಲ್ಲಿ ಪ್ರಿಯ ಇಮಾಮರೊಂದಿಗೆ ಭೇಟಿಯಾಗುವ ಭಾಗ್ಯ ದೊರೆಯಬೇಕೆಂದು. ಇಂದು ಆ ಪ್ರಾರ್ಥನೆಯ ಸ್ವೀಕಾರದ ಕ್ಷಣವಿತ್ತು. ನನಗೆ ಅತ್ಯಂತ ಸಮೀಪವಾದ ಹುಝೂರ್‌ರೊಂದಿಗೆ ಭೇಟಿಯಾಗುವ ಭಾಗ್ಯ ಲಭಿಸಿದೆ. ಅದನ್ನು ನಾನು ಎಂದೂ ಮರೆಯಲು ಸಾಧ್ಯವಿಲ್ಲ.

ಯುವಕನೊಬ್ಬನು ಹೇಳಿದನು. ಇಂದು ನಾನು ತುಂಬ ಸಂತುಷ್ಟನಾಗಿದ್ದೇನೆ. ನಾನು ಹೆಚ್ಚು ಹೇಳಲು ಶಕ್ತನಲ್ಲ. ಇಷ್ಟು ಮಾತ್ರ ಹೇಳಬಲ್ಲೆ. ಅಲ್ಲಾಹುಮ್ಮಾ ಅಯ್ಯದ್ ಇಮಾಮಾ ಬಿರೂಹಿಲ್ ಖುದುಸ್.

ಓರ್ವ ಬಾಲಕನು ಸಂತಸದಿಂದ ಹೇಳುತ್ತಿದದ. ಹುಝೂರ್ ನನಗೆ ಪೆನ್ ಮತ್ತು ಚಾಕ್ಲೇಟ್ ಕೊಟ್ಟಿದ್ದಾರೆ. ನಾನು ಈ ಪೆನ್ನಿನಿಂದ ಶಾಲೆಯ ಕೆಲಸ ಮಾಡುವೆನು. ಇನ್ನೂ ನಾನು ಹೆಚ್ಚು ಶ್ರಮವಹಿಸುವೆನು.

ಭೇಟಿಯ ಈ ಕಾರ್ಯಕ್ರಮವು 8 ಗಂಟೆಯವರೆಗೆ ಜಾರಿಯಲ್ಲಿತ್ತು. ಅನಂತರ ಎಂಟು ಕಾಲು ಗಂಟೆಗೆ ಹುಝೂರ್ ಸಭಾಂಗಣಕ್ಕೆ ಆಗಮಿಸಿ ಮಾಗ್ರಿಬ್ ಇಸ್ಲಾಮ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿ ನಿಲಯಕ್ಕೆ ತೆರಳಿದರು.

ಅಹ್ಮದಿಯಾ ಜಮಾಅತ್ ಫ್ರಾನ್ಸ್‌ನ 27ನೇ ವಾರ್ಷಿಕ ಜಲ್ಸ 4 ಅಕ್ಟೋಬರ್ ಶುಕ್ರವಾರ ದಿನದಂದು ಪ್ರಾರಂಭವಾಗುತ್ತದೆ. ಬೃಹತ್ ಕಟ್ಟಡಗಳಲ್ಲದೆ ಈ ವಿಶಾಲವಾದ ಭೂಪ್ರದೇಶದಲ್ಲಿ ಮಾರ್ಕಿಗಳು ಮತ್ತು ಶಾಮಿಯಾನಗಳು ಹಾಗೆ ವಾರ್ಷಿಕ ಜಲ್ಸದ ವ್ಯವಸ್ಥೆಗಳು ಮಾಡಲಾಗಿದೆ.

ಪುರುಷರಿಗೆ ಮತ್ತು ಲಜ್ನಗಳಿಗೆ ಪ್ರತ್ಯೇಕ ಮಾರ್ಕಿಗಳನ್ನು ಹಾಕಲಾಗಿದೆ. ಅದಲ್ಲದೇ ಪುರುಷರ ಜಲ್ಸಗಳಿಗೆ ಪ್ರತ್ಯೇಕ ಮಾರ್ಕಿಗಳನ್ನು ಹಾಕಲಾಗಿದೆ. ಅದಲ್ಲದೆ ಪುರುಷ ಜಲ್ಸ ಸ್ಥಳದ ಭಾಗದಲ್ಲಿ MTA ವ್ಯವಸ್ಥೆಗಳಿಗಾಗಿ ಪ್ರತ್ಯೇಕ ಮಾರ್ಕಿ ಹಾಕಲಾಗಿದೆ. ವಿಶೇಷ ಅತಿಥಿಗಳಿಗೆ ಪ್ರತ್ಯೇಕ ಮಾರ್ಕಿ ಹಾಕಲಾಗಿದೆ. ಅದಲ್ಲದೇ ವಸ್ತು ಪ್ರದರ್ಶನ ವಿಭಾಗ, ತಬ್ಲೀಗ್ ವಿಭಾಗ, Humanity First ವಿಭಾಗ, ಅಮಾನಾತ್ ವಿಭಾಗಗಳಿಗಾಗಿ ಪ್ರತ್ಯೇ ಮಾರ್ಕಿಗಳ ವ್ಯವಸ್ಥೆ ಮಾಡಲಾಗಿದೆ.

ಜಲ್ಸ ಸ್ಥಳದ ಲಜ್ನ ವಿಭಾಗದಲ್ಲಿ ಲಜ್ನಗಳ ಜಲ್ಸ ಸ್ಥಳಕ್ಕಾಗಿ ಅಲ್ಲದೇ ಲಜ್ನ ಉಪಹಾರಕ್ಕಾಗಿಯೂ ಪ್ರತ್ಯೇಕವಾಗಿ ಮಾರ್ಕಿ ಮಾಡಲಾಗಿದೆ. ರಿಜಿಸ್ಟ್ರೇಶನ್ ವಿಭಾಗ ಮತ್ತು ಇತರ ಕಚೇರಿಗಳು ಲಜ್ನಗೋಸ್ಕರ ಮತ್ತು ಒಂದು ಪ್ರತ್ಯೇಕ ಬಾಝುರ (ಮಾರುಕಟ್ಟೆ) ವ್ಯವಸ್ಥೆ ಮಾಡಲಾಗಿದೆ. ಶೌಚಾಲಯಗಳ ವ್ಯವಸ್ಥೆಯೂ ಇದೆ. ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.

ಅಲ್ಲಾಹನ ಅನುಗ್ರಹದಿಂದ ಈ ಭೂಭಾಗದ ಮೇಲೆ, "ಜಮಾಅತಿನ ಕೇಂದ್ರ ಸ್ಥಳವಾದ "ಬೈತುಲ್ ಅತಾ" ದಲ್ಲಿ ಇದು ಸುಮಾರು ಆರು ಮುಕ್ಕಾಲು ಹೆಕ್ಟೇರ್‌ಗಳಲ್ಲಿ ವ್ಯಾಪಿಸಿದೆ. ಆಲ್ಸ ಸಾಲಾನದ ಎಲ್ಲ ವ್ಯವಸ್ಥೆಗಳು ಸುಲಲಿತವಾಗಿ ಮಾಡಲ್ಪಟ್ಟಿದೆ. ಅಲ್ಲಾಹನ ಅನುಗ್ರಹದಿಂದ ಫ್ರಾನ್ಸ್ ಜಮಾಅತಿನವರಿಗೆ ಒಂದು ವಿಶಾಲವಾದ ಮತ್ತು ಬಯಲು ಜಾಗ ದೊರೆತಂತಾಗಿದೆ. ಅಲ್‌ಹಮ್ದು ಲಿಲ್ಲಾಹ್.

**4 ಅಕ್ಟೋಬರ್ 2019 ಶುಕ್ರವಾರ**

ಹುಝೂರ್ ಅನ್ವರ್ (ಅಬಿಅ) ಮುಂಜಾನೆ 6 ಗಂಟೆ 45 ಸಮೀಪಕ್ಕೆ ಸಭಾಂಗಣಕ್ಕೆ ಆಗಮಿಸಿ ನಮಾಝ್ ಫಜರ್ ನಿರ್ವಹಿಸಿದರು. ನಮಾಝ್ ಆದ ನಂತರ ಹುಝೂರ್ ತಮ್ಮ ವಸತಿ ನಿಲಯಕ್ಕೆ ತೆರಳೀದರು. ಮುಂಜಾನೆ ಹುಝೂರ್ ವಿವಿಧ ರೀತಿ ಕಚೇರಿ ಕಾರ್ಯಗಳನ್ನು ನಿರ್ವಹಿಸಿದರು.

**ಜಲ್ಸದ ಸಾಲಾನದ ಪ್ರಾರಂಭ:**

ಇಂದು ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತ್ ಫ್ರಾನ್ಸ್‌ನ 27ನೇ ವಾರ್ಷಿಕ ಜಲ್ಸ ಪ್ರಾರಂಭ ಆಗುವುದಿತ್ತು. ಇಂದು ಜಲ್ಸದ ಪ್ರಥಮ ದಿನವಾಗಿತ್ತು. ಕಾರ್ಯಕ್ರಮದನ್ವಯ ಹುಝೂರ್ ಎರಡು ಗಂಟೆಗೆ ಧ್ವಜಾರೋಹಣ ಮಾಡಲು ಆಗಮಿಸಿದರು. ಹುಝೂರ್ ಅಹ್ಮದಿಅತ್ತಿನ ಧ್ವಜವನ್ನು ಆರೋಹಣ ಮಾಡಿದರು. ಅಮೀರ್ ಸಾಹಿಬ್ ಫ್ರಾನ್ಸ್ ರಾಷ್ಟ್ರಧ್ವಜವನ್ನು ಆರೋಹಣ ಮಾಡಿದರು. ನಂತರ ಹುಝೂರ್ ದುಆ ಮಾಡಿಸಿದರು. MTA International ನಿಂದ ಜಲ್ಸ ಸ್ಥಳದಿಂದ ನೇರ ಪ್ರಸಾರ ಪ್ರಾರಂಭಗೊಂಡಿತ್ತು. ಧ್ವಜಾರೋಹಣ ಈ ಸಮಾರಂಭವು ಲೋಕಾದ್ಯಂತ ಪ್ರಸಾರವಾಗುತ್ತಿತ್ತು. ನಂತರ ಹುಝೂರ್ ಪುರುಷರ ಜಲ್ಸ ಸ್ಥಳಕ್ಕೆ ಆಗಮಿಸಿದರು ಮತ್ತು ಖುತುಬ ಜುಮಅ ಪ್ರಾರಂಭಿಸಿದರು. ಅದರೊಂದಿಗೆ ಜಲ್ಸ ಉದ್ಘಾಟನೆಗೊಂಡಿತು. (ಖುತುಬದ ಸಂಪೂರ್ಣ ಬರಹ ಅಖ್ಬಾರೆ ಬದರ್ 24 ಅಕ್ಟೋಬರ್ 2019 ರ ಸಂಪುಟದಲ್ಲಿ ನೋಡಬಹುದಾಗಿದೆ).

ಹುಝೂರ್ ಅನ್ವರ್ (ಅಬಿಅ) ಅವರ ಈ ಖುತುಬ ಜಮಾಅವು 2 ಗಂಟೆ 55 ನಿಮಿಷದವರೆಗೆ ನಡೆಯಿತು. ಅನಂತರ ಹುಝೂರ್ ಜುಮಅ ನಮಾಝ್ ಜೊತೆಗೆ ಅಸರ್ ನಮಾಝ್ ಜಮಾಗೊಳಿಸಿ ನಿರ್ವಹಿಸಿದರು.

ನಮಾಝ್ ನಿರ್ವಹಣೆಯ ನಂತರ ಹುಝೂರ್ ಅಮೀರ್ ಸಹಿಬ್ ಫ್ರಾನ್ಸ್ ಅವರಿಗೆ ನಿರ್ದೇಶಿಸಿದರು. ವೇದಿಕೆಯ ಮೇಲೆ ಇದ್ದ ಬ್ಯಾನರ್ ಅನ್ನು ನಮಾಝ್ ಸಮಯಗಳಲ್ಲಿ ಅದರ ಕೆಳಭಾಗವನ್ನು ವಸ್ತ್ರದಿಂದ ಮುಚ್ಚಿಡಿರಿ. ಏಕೆಂದರೆ ದೃಷ್ಟಿ ಬೀಳಬಾರದು. ಬ್ಯಾನರ್ ಮೇಲೆ ಫ್ರಾನ್ಸ್ ಜಮಾಅತ್ತಿನ ಹಿಂದಿನ ಜಲ್ಸದ ತುಣುಕುಗಳನ್ನು ಚಿತ್ರಗಳ ಮೂಲಕ ಪ್ರದರ್ಶಿಸಲಾಗಿತ್ತು. ಹಾಗೆಯೇ ಜಮಾಅತಿನ ಹೊಸ ಕೇಂದ್ರವಾದ "ಬೈತುಲ್ ಅತಾ" ವು ಚಿತ್ರ ಪ್ರದರ್ಶನ ಮಾಡಲಾಗಿತ್ತು. ನಂತರ ಹುಝೂರ್ ತಮ್ಮ ವಸತಿ ಹಿಲಯಕ್ಕೆ ತೆರಳಿದರು.

ಇಂದು ಜುಮುಅ ನಮಾಝ್ ಹಾಜರಿ ಹದಿಮೂರು ನೂರು (1300) ಆಗಿತ್ತು. ಇದರಲ್ಲಿ ಅನ್ಯದೇಶದಿಂದ ಸುಮಾರು ನಾಲ್ಕು ನೂರು ಅತಿಥಿಗಳು ಭಾಗವಹಿಸಿದ್ದರು. ಫ್ರಾನ್ಸ್‌ನವರಲ್ಲದೇ, ಜರ್ಮನಿ, ಬ್ರಿಟಾನಿಯಾ, ಬೆಲ್ಜಿಯಂ, ಸ್ಪೇನ್, ಅಲ್ಜೀರಿಯಾ, ಬೋರ್‌ಕೇನ ಫಾಸು, ಕೆನಡ, ಗೇಂಬಿಯಾ, ಆಮೋರಿಕೋಸ್ಟ್, ಹಾಲೆಂಡ್, ಇಟಲಿ, ಮಾಲಿ, ಪಾಕಿಸ್ತಾನ, ಸೆಸಿಗಾಲ್, ಸ್ವಿಝರ್‌ಲ್ಯಾಂಡ್, ಸಂಯುಕ್ತ ಅರಬ್, ಅಮಾರಾತ್ ಮತ್ತು ಯು.ಎಸ್.ಎ. ನಿಂದ ಸಂಬಂಧಿಸಿದ ಜಮಾಅತ್ ಬಾಂದವರು ಭಾಗವಹಿಸಿದ್ದರು. ಹುಝೂರರ ಖುತುಬ ಜಮಾಅತ್ ಜಲ್ಸ ಸ್ಥಳದಿಂದ ನೇರ ಪ್ರಸಾರ ಮಾಡಲಾಯಿತು.

ಕಾರ್ಯಕ್ರಮದನ್ವಯ 8 ಗಂಟೆಗೆ ಹುಝೂರ್ ಜಲ್ಸ ಸ್ಥಳಕ್ಕೆ ಆಗಮಿಸಿ ಮಾಗ್ರಿವ್ ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿದರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿನಿಲಯಕ್ಕೆ ತೆರಳಿದರು.

**(ಮುಂದುವರಿಯುವುದು)**

********************

**ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ:–**

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ನ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅ)ರವರ ಹೊಸ ಖುತ್‌ಬ ಜುಮುಅ ಮತ್ತು ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಅ ಪ್ರಶ್ನೋತ್ತರರ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕ)**

**ಸೂಚನೆ**

ಓದುಗರಲ್ಲಿ ವಿನಂತಿಸಿಕೊಳ್ಳುವುದೇನಂದರೆ ಈ ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳು ಹಾಗೂ ಸಲಹೆ ಸೂಚನೆಗಳಿದ್ದಲ್ಲಿ ನಮ್ಮನ್ನು ನೇರವಾಗಿ ಸಂಪರ್ಕಿಸಿ.

**email: www.kannadabadar@gmail.com**

**Mob or whatsapp: 8050330779**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

TITLE NO: PUNKAN00001
Weekly **BADAR** Qadian
Distt: Gurdaspur (Pb.) INDIA Qadian - 143516
Vol No.1 Thursday, 27 February 2020 Issue No. 07

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಯೂರೋಪ್ ಪ್ರವಾಸ (ಸೆಪ್ಟೆಂಬರ್, ಅಕ್ಟೋಬರ್ 2019)*

**(ಬದರ್ ಸಂಚಿಕೆ 06ರ ವರದಿಯ ಉಳಿದ ಭಾಗ)**

ಸ್ಥಳೀಯ ಅತಿಥಿಯೊಬ್ಬರು ಶ್ರೀಮತಿ ದೇನೆ.ಕೆ ಸಾಹಿಬಾ ಹೇಳಿದರು. ನಮ್ಮ ಕಾರ್ಯಕ್ರಮವು ತುಂಬ ಒಳ್ಳೆಯ ರೀತಿಯಿಂದ ಆಯೋಜಿಸಲಾಗಿತ್ತು. ನಿಮ್ಮ ಖಲೀಫರನ್ನು ಕಂಡು ಬಹಳ ಸಂತೋಷವಾಯಿತು ಹಾಗೂ ಅವರ ಭಾಷಣ ಉತ್ತಮವಾಗಿತ್ತು. ನಿಮ್ಮ ಕಾರ್ಯಕ್ರಮದ ಇನ್ನೊಂದು ಒಳ್ಳೆಯ ವಿಷಯವೇನೆಂದರೆ ಮಹಿಳೆಯರ ವ್ಯವಸ್ಥೆಯು ಚೆನ್ನಾಗಿತ್ತು. ಈ ಮಸೀದಿಗೆ ಬಂದು ನಿಮ್ಮ ಜಮಾಅತಿನ ಮಹಿಳೆಯರೊಂದಿಗೆ ಮತ್ತೊಮ್ಮೆ ಭೇಟಿಯಾಗಬಯಸುತ್ತೇನೆ.

ಸ್ಥಳೀಯ ಅತಿಥಿಯೊಬ್ಬರಾದ Dilip ಸಾಹಿಬ್ ಹೇಳಿದರು. ನನಗೆ ನಿಮ್ಮ ಮಸೀದಿ ನೋಡುವ ತವಕವಿತ್ತು. ಆದ್ದರಿಂದ ನಾನು ಇಲ್ಲಿಗೆ ಬಂದಿರುತ್ತೇನೆ. ಅದರ ಜೊತೆಯಲ್ಲಿ ನಿಮ್ಮ ಖಲೀಫರನ್ನು ಕಂಡಿದ್ದೇನೆ. ಇಂದಿನ ದಿನವು ನನಗೆ ವಿಶೇಷ ದಿನವಾಗಿದೆ. ನಿಮ್ಮ ಖಲೀಫರ ಭಾಷಣವು ನನ್ನ ಮೇಲೆ ತುಂಬ ಒಳ್ಳೆಯ ಪರಿಣಾಮ ಬೀರಿದೆ.

ಸ್ಥಳೀಯ ಅತಿಥಿಯೊಬ್ಬರಾದ ವರ್ದೋನ್ ಸಾಹಿಬ್ ಹೇಳಿದರು ಇದು ನನ್ನ ಮೊದಲ ಅವಕಾಶವಾಗಿದೆ. ಬರುವುದಕ್ಕಿಂತ ಮುಂಚೆ ನನ್ನ ನೆರೆಯವನು ಹೇಳಿದ್ದ ಎಚ್ಚರದಿಂದಿರು. ಮುಸಲ್ಮಾನರು ಎಂದು ಏನು ಮಾಡಬಹುದೆಂದು ಹೇಳಲಾಗದು. ಆದರೆ ಇಲ್ಲಿ ಬಂದು ನನಗೆ ತುಂಬ ಹಿತವೆನಿಸಿದೆ. ನಿಮ್ಮ ಜಮಾಅತಿನ ಜನರು ಪ್ರಾರಂಭದಿಂದ ಅಂತ್ಯದವರೆಗೂ ನೀವು ನೀಡಿದ ಸತ್ಕಾರ ಮರೆಯಲಾಗದು. ನಿಮ್ಮ ಖಲೀಫರ ಭಾಷಣದಿಂದ ನೀವು ಶಾಂತಿ ಪ್ರಿಯರು ಎಂದು ತಿಳಿದಿದ್ದೇವೆ. ಹಾಗೆಯೇ ಅಲ್ಮೆರೆ(ಯುರೋಪ್) ನಗರದ ಪರಿಸರವನ್ನು ಹಾಳುಗೆಡುವುದಿಲ್ಲ ಎಂದು ಭಾವಿಸಿದ್ದೇನೆ.

ಸ್ಥಳೀಯ ಮಹಿಳಾ ಅತಿಥಿಯೊಬ್ಬರಾದ ಎವಲಿನ್ ಸಾಹೀಬ ಹೇಳಿದರು. ನಿಮ್ಮ ಖಲೀಫರ ಭಾಷಣದ ಇಂದಿನ ಪರಿಸ್ಥಿತಿಗೆ ಅನುಗುಣವಾಗಿದೆ. ವಿಷಾದದ ಮಾತೆಂದರೆ ಇಸ್ಲಾಮಿನ ಈ ಚಿತ್ರವನ್ನು ಇತರರು ಲೋಕಕ್ಕೆ ತೋರಿಸುತ್ತಿಲ್ಲ. ನಿಮ್ಮ ಜಮಾಅತಿನ ಜನರು ತುಂಬ ಶ್ರಮ ಪಡುವರು ಮತ್ತು ಅತಿಥಿ ಸತ್ಕಾರ ಮಾಡುವವರಾಗಿದ್ದಾರೆ. ನಾನು ಈ ಮಸೀದಿಯನ್ನು ಪ್ರಥಮ ಬಾರಿಗೆ ನೋಡಿರುತ್ತೇನೆ. ಆದರೆ ಮುಂದೆಯೂ ನಾನು ಇಲ್ಲಿಗೆ ಆಗಮಿಸಲು ಬಯಸುತ್ತೇನೆ. ಏಕೆಂದರೆ ನಿಮ್ಮ ಮಸೀದಿಯಿಂದ ನನಗೆ ನೆಮ್ಮದಿ ದೊರೆತಿದೆ.

ಸಿಖ್ ಮಹಿಳೆಯೊಬ್ಬರಾದ ಗುರ್‌ಪ್ರೀತ್ ಕೌರ್ ಸಾಹಿಬ ಹೇಳಿದರು! ನಾವು ನಿಮ್ಮ ಜಮಾಅತಿಗೆ ಬಹಳ ವರ್ಷದಿಂದ ಪರಿಚಿತರಾಗಿದ್ದೇವೆ. ನಾವು ಖಾದಿಯಾನಿಗೂ ಹೋಗಿ ಬಂದಿರುತ್ತೇವೆ. ಭಾರತದ ಅಮೃತಸರದಲ್ಲಿ ನಮ್ಮ ಮನೆಯಿದೆ. ನಿಮ್ಮ ಇಂದಿನ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ತುಂಬ ಹಿತವೆನಿಸಿದೆ. ನೀವೆಲ್ಲರೂ ಒಂದೇ ಕುಟುಂಬದವರಂತೆ ಇರುತ್ತೀರಿ. ಇಂದಿನ ಕಾಲದಲ್ಲಿ ಇದು ಅತ್ಯಂತ ಅವಶ್ಯಕವಾಗಿದೆ.

**2 ಅಕ್ಟೂಬರ್ 2019 (ಬುಧವಾರ)**

ಹುಝೂರ್(ಅಬಿಅ) ಮುಂಜಾನೆ 6 ಗಂಟೆಗೆ ಮಸ್ಜಿದ್ ಬೈತುನ್ನೂರ್ ಆಗಮಿಸಿ ಫಜ್ರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿ ನಿಲಯಕ್ಕೆ ನಿರ್ಗಮಿಸಿದರು. ಮುಂಜಾನೆ ಹುಝೂರ್(ಅಬಿಅ) ಕಚೇರಿಯ ಅಂಚೆ ಪತ್ರಗಳನ್ನು ಮತ್ತು ವರದಿಗಳನ್ನು ಪರಿಶೀಲಿಸಿದರು. ಮತ್ತು ನಿರ್ದೇಶನಗಳನ್ನು ನೀಡಿದರು.

11 ಗಂಟೆ 20 ನಿಮಿಷಕ್ಕೆ ಹುಝೂರ್(ಅಬಿಅ) ಮುಕರ್‍ರಮ್ ಅಮೀರ್ ಸಾಹಿಬ್ ಹಾಲೆಂಡ್ ಹಿಬತುನ್ನೂರ್ ಫರ್‌ಹಾನ್ ಸಾಹಿಬ್ ಮತ್ತು ಮುಕರ್‍ರಮ್ ಹಾಮಿದ್ ಕರೀಮ್ ಮಹ್ಮೂದ್ ಸಾಹಿಬ್ ಮುಬಲ್ಲಿಗ್ ನನ್‌ಸ್ಪೇಟ್ ಹಾಲೆಂಡ್ ಅವರನ್ನು ನೆನಪಿಸಿದರು. ಇಬ್ಬರು ಹುಝೂರ್(ಅಬಿಅ) ರೊಡನೆ ಕಚೇರಿಯಲ್ಲಿ ಭೇಟಿಯಾಗುವ ಭಾಗ್ಯ ಪಡೆದರು. ಹುಝೂರ್(ಅಬಿಅ) ಕೆಲವು ಅಗತ್ಯ ಕಾರ್ಯಗಳ ಕುರಿತು ನಿರ್ದೇಶನ ನೀಡಿದರು.

**ಹಾಲೆಂಡಿನಿಂದ ಫ್ರಾನ್ಸ್ ಕಡೆಗೆ ಪ್ರಯಾಣ:**

ಹಾಲೆಂಡಿನ ವಿವಿಧ ಕ್ಷೇತ್ರಗಳಿಂದ ಸಮುದಾಯ ಬಾಂಧವರು ಸ್ತ್ರೀ ಪುರುಷರು ಹುಝೂರ್(ಅಬಿಅ) ರನ್ನು ಬೀಳ್ಕೊಡಲು ಮುಂಜಾನೆಯಿಂದಲೇ ಜಮಾಅತಿನ ಕೇಂದ್ರವಾದ ಬೈತುನ್ನೂರ್‌ಗೆ ಆಗಮಿಸತೊಡಗಿದರು. 11 ಗಂಟೆ 25 ನಿಮಿಷಕ್ಕೆ ಹುಝೂರ್(ಅಬಿಅ) ತಮ್ಮ ವಸತಿ ನಿಲಯದಿಂದ ಹೊರ ಬಂದು ತನ್ನ ಕೈಯನ್ನು ಮೇಲೆತ್ತಿ ಎಲ್ಲರಿಗೂ ಅಸ್ಸಲಾಮು ಅಲೈಕುಂ ಹೇಳಿದರು ಹಾಗೂ ದುಆ ಮಾಡಿಸಿ ತಂಡವು ನನ್‌ಸ್ಪೀಟ್‌ನಿಂದ ಪ್ರಾಂಸ್‌ಗೆ ಪ್ರಯಾಣ ಬೆಳೆಸಿದರು.

ನನ್‌ಸ್ಪೀಟ್ (ಹಾಲೆಂಡ್) ನಿಂದ ಪ್ರಾಂಸ್‌ನ ನಗರ Triechateak (ಅಲ್ಲಿ ಪ್ರಾನ್ಸ್ ಜಮಾಅತ್ ಖರೀದಿಸಿದ ಹೊಸ ಕೇಂದ್ರ "ಬೈತುಲ್ ಅತಾ") ಅದರ ದೂರ 586 ಕಿ.ಮೀ ಆಗಿದೆ. 130 ಕಿ.ಮೀ ದೂರ ಪ್ರಯಾಣಿಸಿದ ನಂತರ ಹಾಲೆಂಡಿನ ಗಡಿ ದಾಟಿ ಬೆಲ್ಜಿಯಂ ದೇಶ ಪ್ರವೇಶಿಸಿದರು.

ಕಾರ್ಯಕ್ರಮದನ್ವಯ ಪ್ರಾನ್ಸ್‌ನ ಜಮಾಅತ್ ಬೆಲ್ಜಿಯಂನ ನಗರ Kotjrijk ಹತ್ತಿರವಾಗಿರುವ ಊರು Sint-Anna ದ ಒಂದು ಹೋಟೆಲ್ "Hostellerie Klokhof" ನಲ್ಲಿ ಝುಹರ್ ಮತ್ತು ಅಸರ್ ನಮಾಝ್‌ಗಳನ್ನು ಜಮ ಮಾಡಿ ನಿರ್ವಹಿಸುದರು. ಮತ್ತು ಅಲ್ಲಿಯೇ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲಾಗಿತ್ತು. ಫ್ರಾನ್ಸ್‌ನಿಂದ ಬಂದ ತಂಡದಲ್ಲಿ ಮುಕರ್‍ರಮ್ ಅಮೀರ್ ಸಾಹಿಬ್ ಅಶ್ವಕ್ ರಬ್ಬಾನಿ ಸಾಹೇಬ್, ಮುಕರ್‍ರಮ್ ಫಹೀಮ್ ಅಹ್ಮದ್ ನಿಯಾಝ್ ಸಾಹಿಬ್ German sea, ಮುಕರ್‍ರಮ್ ಅಸ್ಲಮ್ ಗೋಬೇರಿ ಸಾಹಿಬ್ ನಾಯಿಬ್ ಅಮೀರ್ ಜಮಾಅತ್ ಫ್ರಾನ್ಸ್, ಮುಕರ್‍ರಮ್ ಮನ್ಸೂರ್ ಅಹ್ಮದ್ ವೆನ್ಸ್ ಸಾಹಿಬ್ National sec. Tarbiat, ಮುಕರ್‍ರಮ್ ಜಮೀಲುರ್ ರಹ್ಮಾನ್ ಸಾಹಿಬ್ ಅಧ್ಯಕ್ಷರು ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಫ್ರಾಂಸ್ ತಮ್ಮ ರಕ್ಷಣಾ ತಂಡದೊಂದಿಗೆ ಭಾಗವಹಿಸಿದ್ದರು.

ಹಾಲೆಂಡಿನ ಗಡಿ ದಾಟಿ ಬೆಲ್ಜಿಯಂ ಪ್ರವೇಶ ಮಾಡಿದ ನಂತರ ಇನ್ನು 155 ಕಿ.ಮೀ ಪ್ರಯಾಣ ಮುಂದುವರೆಸಿ 2 ಗಂಟೆ 15 ನಿಮಿಷಕ್ಕೆ Sint-Anna ಊರಿನ ಹೋಟೆಲ್ Hostellerie Klokhofಗೆ ಆಗಮಿಸಿದ್ದರು. ಅಲ್ಲಿ ಫ್ರಾಂಸ್‌ನ ಅಮೀರ್ ಸಾಹಿಬರು ತಮ್ಮ ಸಂಗಡಿಗರೊಂದಿಗೆ ಸ್ವಾಗತ ಬಯಸಿ ಶುಭ ಕೋರಿದರು ಹಾಗೂ ಅವರನ್ನು ಭೇಟಿಯಾದರು. ಒಂದು ಸಭಾಂಗಣದಲ್ಲಿ ನಮಾಝ್ ಮಾಡುವ ವ್ಯವಸ್ಥೆ ಮಾಡಲಾಗಿತ್ತು. ಹುಝೂರ್(ಅಬಿಅ) 2.40 ಗಂಟೆಗೆ ಆಗಮಿಸಿ ಝೊಹರ್ ಮತ್ತು ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿದರು. ಅಲ್ಲಿ ಮಧ್ಯಾಹ್ನದ ಊಟದ ವ್ಯವಸ್ಥೆ ಮಡಲಾಗಿತ್ತು. ಅದರ ನಂತರ ಫ್ರಾಂಸ್‌ಗೆ ಪ್ರಯಾಣ ಬೆಳೆಸುವ ಕಾರ್ಯಕ್ರಮವಿತ್ತು. ಪ್ರಯಾಣ ಬೆಳೆಸುವ ಮುಂಚೆ ಹುಝೂರ್(ಅಬಿಅ) ಪ್ರೀತಿಪೂರ್ವಕವಾಗಿ ಹಾಲೆಂಡಿನಿಂದ ಇಲ್ಲಿಯವರೆಗೆ ಬಂದ ತಂಡದವರಿಗೆ ಭೇಟಿ ಮಾಡುವ ಅವಕಾಶ ಮಾಡಿಕೊಟ್ಟರು. ಹಾಲೆಂಡಿನಿಂದ ಮಾನ್ಯ ಹಿಬತ್ತುನ್ನೂರ್ ಫರ್‌ಹಾಖನ್ ಸಾಹೆಬ್, ಮಾನ್ಯ ಅಬ್ದುಲ್ ಹಮೀದ್ ಸಾಹೆಬ್‌ಹ್ವಾಲೇಂಡಿನ ಮುಬಲ್ಲಿಗ್ ಆದ ಮಾನ್ಯ ನಯೀಮ್ ಅಹ್ಮದ್ ವಡಾಚ್ ಸಾಹೆಬ್, ಮಾನ್ಯ ಝುಬೇರ್ ಅಹ್ಮದ್ ಸಾಹೆಬ್, ಮಾನ್ಯ ಝಿಲ್ಲುರ್ ರಹ್ಮಾನ್ ಸಾಹೆಬ್, ಮಾನ್ಯ ಸಮರ್ ಅಹ್ಮದ್ ಸಾಹೆಬ, ಮಾನ್ಯ ಚೌಧರಿ ಮುಬಶ್ಶರ್ ಅಹ್ಮದ್ ಸಾಹೆಬ್, ಮಾನ್ಯ ಚೌಧರಿ ಲಯೀಖ್ ಅಹ್ಮದ್ ಸಾಹೆಬ್, ಮಾನ್ಯ ಉಸ್ಮಾನ್ ಅಹ್ಮದ್ ಸಾಹೆಬ್ ಇವರು ಖುದ್ದಾಮರ ಒಂದು ಸೆಕ್ಯುರಿಟಿ ತಂಡದೊಂದಿಗೆ ಆಗಮಿಸಿದ್ದರು. ತದನಂತರ ಇಲ್ಲಿಂದ ಈ ತಂಡಗಳು ಹಾಲೆಂಡಿಗೆ ಮರಳಬೇಕಾಗಿತ್ತು.

3 ಗಂಟೆ 35 ನಿಮಿಷಕ್ಕೆ ಹುಝೂರ್(ಅಬಿಅ) ದುಆ ಮಾಡಿಸಿದರು ಮತ್ತು ತಂಡವು ಫ್ರಾಂಸ್‌ನತ್ತ ಪ್ರಯಾಣ ಬೆಳೆಸಿತು. ಫ್ರಾಂಸ್‌ನ ವಾಹನ ತಂಡವು ಮುನ್ನಡೆಯುತ್ತಿತ್ತು. ಇಲ್ಲಿಂದ ಬೈತುಲ್ ಅತಾ (ಫ್ರಾಂಸ್)ನ ದೂರವು 251 ಕಿ.ಮೀ ಆಗಿತ್ತು.

*(ಉಳಿದ ವರದಿ ಪುಟ ಸಂಖೆ 07 ರಲ್ಲಿ ಓದಿರಿ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.